## ಎರಡನೆಯ ಚತುರ್ಮಾಸದ 'ಶರಣ ಸಾಹಿತ್ಯ' ಮುಕ್ತ ಐಚ್ಛಿಕ ಪತ್ರಿಕೆ, 2019–2020

### (ಯಾವುದೇ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳಿಗೆ)

### ಪತ್ರಿಕೆ 1 – ಶರಣ ಸಾಹಿತ್ಯ : 12ನೆಯ ಶತಮಾನದ ವಚನ ಸಾಹಿತ್ಯ

[3:1 = 4 ಕ್ರೆಡಿಟ್]

[70:30 = 100 ಅಂಕಗಳಿಗಾಗಿ]

**ಘಟಕ 1 : ವಚನ ಸಾಹಿತ್ಯ :** ಹಿನ್ನೆಲೆ, ಪ್ರೇರಣೆ, ಪ್ರಭಾವ

**ಘಟಕ 2 : ವಚನ ಸಾಹಿತ್ಯ :** ಉಗಮ – ವಿಕಾಸ – ಸ್ವರೂಪ

**ಘಟಕ 3 : ಆಯ್ದ ವಚನಕಾರರು : ಇತಿ ವೃತ್ತ**

ಜೇಡರ ದಾಸಿಮಯ್ಯ – ಅಲ್ಲಮಪ್ರಭು – ಬಸವಣ್ಣ – – ಅಕ್ಕಮಹಾದೇವಿ – ಆಯ್ದಕ್ಕಿ ಲಕ್ಕಮ್ಮ

**ಘಟಕ 4 : ವಚನ ಸಾಹಿತ್ಯ : ಆಯ್ದ ಪರಿಕಲ್ಪನೆಗಳು**

ಭಕ್ತಿ – ಕಾಯಕ – ದಾಸೋಹ – ಅನುಭವ ಮಂಟಪ – ದೇಗುಲ

**ಪರಾಮರ್ಶನ ಸಾಹಿತ್ಯ**


1. ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ
2. ಯುಗಧರ್ಮ ಹಾಗೂ ಸಾಹಿತ್ಯ ದರ್ಶನ – ಕೀರ್ತಿನಾಥ ಕುರ್ತಕೋಟಿ
3. ಕರ್ನಾಟಕ ಸಂಸ್ಕೃತಿ ಸಮೀಕ್ಷೆ – ಹೆಚ್. ತಿಪ್ಪೇರುದ್ರಸ್ವಾಮಿ
4. ದಲಿತ ವರ್ಗದ ಶರಣರು ಹಾಗೂ ಶರಣೆಯರು – ಮ.ನ. ಜವರಯ್ಯ
5. ಶರಣ ಚರಿತಾಮೃತ – ಸಿದ್ದಯ್ಯಪುರಾಣಿಕ
6. ಶರಣರ ಅನುಭಾವ ಸಾಹಿತ್ಯ – ಹೆಚ್. ತಿಪ್ಪೇರುದ್ರಸ್ವಾಮಿ
7. ವಚನ ಧರ್ಮಸಾರ – ಎಂ.ಆರ್. ಶ್ರೀನಿವಾಸಮೂರ್ತಿ
8. ವಚನ ಚಿಂತನಮಾಲೆಯ 31 ಕೃತಿಗಳು – (ಸಂ.) ಬರಗೂರುರಾಮಚಂದ್ರಪ್ಪ
9. ಬಸವಣ್ಣನವರು – ಎಂ. ಚಿದಾನಂದಮೂರ್ತಿ
10. ಜೇಡರ ದಾಸಿಮಯ್ಯನ ವಚನಗಳು – (ಸಂ.) ಎಲ್. ಬಸವರಾಜು

# ಶರಣ ಸಾಹಿತ್ಯ ಪತ್ರಿಕೆ – ೧

## ೧೨ನೆಯ ಶತಮಾನದ ವಚನಸಾಹಿತ್ಯ

### ಅ) ಹಿನ್ನೆಲೆ – ಪ್ರೇರಣೆ – ಪ್ರಭಾವ

ಕ್ರಿ.ಶ. ೧೧೫೦–೧೩೫೦ರ ಕಾಲ ಬಹು ಸಂಕೀರ್ಣವಾದುದು. ಆ ಕಾಲಘಟ್ಟದಲ್ಲಿ ಮಹಮ್ಮದೀಯರು ಉತ್ತರ ಭಾರತವನ್ನು ಕ್ರಮೇಣ ಆಕ್ರಮಿಸಿದರು. ಕರ್ನಾಟಕಕ್ಕೆ ಇಸ್ಲಾಮಿಯರ ನೇರ ದಾಳಿಯ ಬಿಸಿ ತಡವಾಗಿ ಕ್ರಿ.ಶ. ೧೨೯೭ರಲ್ಲಿ ತಟ್ಟಿತು. ಆದರೂ ಭಾರತದ ವಿವಿಧ ಭಾಗಗಳೊಡನೆ ಸಂಪರ್ಕ ಸಂಬಂಧಗಳನ್ನು ಬೆಳೆಸಿಕೊಂಡಿದ್ದ ಕರ್ನಾಟಕ ಪರೋಕ್ಷವಾಗಿ ಬೇರೆಡೆಗಳ ಪ್ರಭಾವಕ್ಕೆ ಒಳಗಾಯಿತು. ಕರ್ನಾಟಕವೂ ಸಾಂಸ್ಕೃತಿಕ ಆಂದೋಲನದ ನೆಲೆಯಾಯಿತು. ಧಾರ್ಮಿಕರಂಗದಲ್ಲಿ ಹೊಸ ಸಿದ್ಧಾಂತಗಳೂ ಮಾರ್ಗಗಳೂ ಹುಟ್ಟಿಕೊಂಡವು. ಸಮಾಜದಲ್ಲಿ ಹೊಸ ವ್ಯವಸ್ಥೆ ಮತ್ತು ಮೌಲ್ಯಗಳನ್ನು ಅಳವಡಿಸುವ ಕಡೆಗೆ ದೃಷ್ಟಿ ಹರಿಯಿತು. ಧಾರ್ಮಿಕವಾಗಿ ಹಿಂದೆ ಇದ್ದ ಜೈನ ಬೌದ್ಧ ಹಿಂದೂ ಧರ್ಮಗಳು ಮುಂದುವರಿದವು. ಜೊತೆಗೆ ಇವುಗಳ ಜಡತ್ವಕ್ಕೆ ಬಂಡಾಯದೋಪಾದಿಯಲ್ಲಿ ಭಕ್ತಿಮಾರ್ಗ ಎಲ್ಲೆಡೆ ಪ್ರಚಲಿತವಾಯಿತು.

ಭಾರತದಲ್ಲಿ ಶಿವಭಕ್ತಿ ವಿಷ್ಣುಭಕ್ತಿ ಚಳುವಳಿಗಳಾದವು. ತಮಿಳ್ನಾಡಿನ ನಾಯನ್ಮಾರರೂ ಆಳ್ವಾರರೂ ಇದರ ಬೀಜ ಬಿತ್ತಿದರು. ಕನ್ನಡನಾಡಿನಲ್ಲಿ ನಡೆದ ಶಿವಶರಣರ ಚಳುವಳಿ ಅಭೂತಪೂರ್ವವಾದ ವಚನಚಳುವಳಿಗೆ ಕಾರಣವಾಯಿತು. ಜೊತೆಗೆ ಉತ್ಕೃಷ್ಟವಾದ ವಚನಸಾಹಿತ್ಯಕ್ಕೆ ಪರೋಕ್ಷವಾಗಿ ಪ್ರೇರಕವಾಯಿತು.

ಸುಮಾರು ಕ್ರಿ.ಶ.೧೧೬೨ರಿಂದ ೧೧೮೨ರವರೆಗೆ ಎರಡು ದಶಕಗಳ ಕಾಲ ಚಾಲುಕ್ಯರಾಜ್ಯವನ್ನಾಳಿದ ಕಲಚುರಿಗಳ ಆರಂಭದ ದೊರೆ ಬಿಜ್ಜಳನ ಕಾಲದಲ್ಲಿ ಕರ್ನಾಟಕ ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಕ್ರಾಂತಿಯನ್ನು ಕಂಡಿತು. ೫–೬ ವರ್ಷ ಆಳುವ ವೇಳೆಗೆ ಆತನ ಸಾಮರ್ಥ್ಯ ಕುಂದಿತು. ಈತನ ತಮ್ಮಂದಿರು ಹಾಗೂ ಮಕ್ಕಳಲ್ಲಿ ಸಿಂಹಾಸನಕ್ಕಾಗಿ ಕಿತ್ತಾಟಗಳು ನಡೆದವು. ಈತನ ಹಿರಿಯಮಗ ಸೋವಿದೇವನನ್ನು ಉತ್ತರಾಧಿಕಾರಿಯನ್ನಾಗಿಸಿದನು. ವಚನಸಾಹಿತ್ಯಕ್ಕೆ ಪ್ರಮುಖ ನೆಲೆಗಟ್ಟನ್ನು ಒದಗಿಸಿದ ಕಾಲ ಸು.ಕ್ರಿ.ಶ. ೧೧೩೦ ರಿಂದ ೧೧೬೬. ಆ ಕಾಲದಲ್ಲಿ ಪ್ರಚಲಿತವಿದ್ದ ಎಲ್ಲ ತಾರತಮ್ಯಗಳನ್ನು ವಿರೋಧಿಸಿ ಹೊಸ ಮಾರ್ಗ ಕಂಡುಕೊಳ್ಳುವ ಅವಶ್ಯಕತೆ ಒದಗಿತ್ತು. ಆ ಕಾಲವು ಹಿಂದಿನ ವ್ಯವಸ್ಥೆಯ ಎಲ್ಲ ಅಸಾಂಗತ್ಯಗಳನ್ನು ವಿಕೃತಿಗಳನ್ನು ಇಲ್ಲವಾಗಿಸುವ ಹೊಸ ಪ್ರಜ್ಞೆಗೆ ಕಾತರಿಸುತ್ತಿತ್ತು. ಅದಕ್ಕೆ ಭಕ್ತಿಮಾರ್ಗ ಉತ್ತಮ ಸಾಧನವಾಗಿತ್ತು. ಶಿವತತ್ವಪ್ರಸಾರ ಮಾಡುವುದು ಸಾಂದರ್ಭಿಕವೂ ಕಾರ್ಯಯೋಗ್ಯವೂ ಆಗಿದ್ದು ಶಿವಭಕ್ತಿಯ ಮೂಲಕ ಧಾರ್ಮಿಕ ಸಾಮಾಜಿಕ ಸುಧಾರಣೆಗಳನ್ನು ಸಾಧಿಸಿತು ವಚನಚಳುವಳಿ. ಬಹು ಪ್ರಾಚೀನಕಾಲದಿಂದಲೂ ಇದ್ದ ಶೈವನಿಷ್ಠೆಯನ್ನು ಮಾನವೀಯ ನೆಲೆಯಲ್ಲಿ ಪರಿಷ್ಕರಿಸಿ ಅದಕ್ಕೆ ಸಾಂಘಿಕ ಸಂಘಟನೆಯ ವಿನೂತನ ಸಾಂಸ್ಥಿಕ ರೂಪವನ್ನು ಬಸವಣ್ಣನವರು ಕೊಟ್ಟುದು ಭಾರತೀಯ ಅಷ್ಟೇಕೆ ವಿಶ್ವದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಇತಿಹಾಸದಲ್ಲಿಯೇ ಅಭೂತಪೂರ್ವವೆನಿಸಿತು.

ಶಿವನೇ ಪರಮೋಚ್ಚ; ಎಲ್ಲರೂ ಶಿವನ ಶಿಶುಗಳೇ; ಅವನನ್ನು ಅರಿಯುವುದೇ, ಅರಿತು ಅವನಲ್ಲಿ ಬೆರೆಯುವುದೇ ಬಾಳಿನ ಅಂತಿಮ ಗುರಿ; ಅದಕ್ಕೆ ಈ ಇಹಲೋಕದಲ್ಲಿ ಯೋಗ್ಯವಾಗಿ ಬಾಳುವುದೇ ನಮಗಿರುವ ಏಕೈಕ ಮಾರ್ಗ; ಅದಕ್ಕಾಗಿ ಸಾಮಾಜಿಕವಾಗಿ ಧಾರ್ಮಿಕವಾಗಿ ಆರ್ಥಿಕವಾಗಿ ಸಮಾನತೆಯಿಂದ ಬಾಳಬೇಕೆಂಬ ಹೊಸಭಾವನೆಯನ್ನು ಈ ಪಂಥ ಹುಟ್ಟುಹಾಕಿತು. ಇದನ್ನು ಶರಣಮಾರ್ಗ, ಶಿವಶರಣ ಮಾರ್ಗವೆಂದೂ ಕರೆಯುತ್ತಾರೆ. ಬಸವಣ್ಣನವರನ್ನೂ ಒಳಗೊಂಡಂತೆ ಇದರ ಪ್ರವರ್ತಕರನ್ನು ಶರಣರೆಂದು

ಕರೆಯುತ್ತಾರೆ. ಅವರು ಮೇಲುಕೀಳಿಲ್ಲದ, ಲಿಂಗತಾರತಮ್ಯವಿಲ್ಲದ, ಮೇಲ್ಜಾತಿ ಕೆಳಜಾತಿಗಳಿಲ್ಲದ ಕಾಯಕ ದಾಸೋಹನಿರತರಾದ ಸತ್ಯದ ಅರಿವನ್ನು ಪಡೆಯುವ ಏಕೈಕ ಗುರಿಯ ಶರಣರ ಸಮಾಜ ಕಟ್ಟಬಯಸಿದರು. ಅದಕ್ಕೆ ಆ ಕಾಲದ ಯುಗಮನೋಧರ್ಮದ ಹಿನ್ನೆಲೆಯಲ್ಲಿ ಶಿವದೀಕ್ಷೆ-ಷಟ್ಸ್ಥಲ-ಪಂಚಾಚಾರ-ಅಷ್ಟಾವರಣಗಳ ಮೂಲಕ ಪ್ರತಿಯೊಬ್ಬರ ಆತ್ಮೋನ್ನತಿಯ ಕನಸನ್ನು ಕಂಡರು.

ಹೀಗೆ ಶಿವಶರಣರು ಆ ಕಾಲದ ಯುಗಮನೋಧರ್ಮಕ್ಕೆ ತಕ್ಕಂತೆ ಧಾರ್ಮಿಕದ ನೆಲೆಯಲ್ಲಿ ಸಮಾಜದ ಎಲ್ಲ ಜಾತಿ ವರ್ಗಗಳ ಜನರನ್ನು ಒಳಗೊಳ್ಳುವಂತೆ ಅತ್ಯಂತ ವೈಚಾರಿಕವಾದ ಮಾನವೀಯವಾದ ಹೋರಾಟವನ್ನು ವ್ಯಾಪಕನೆಲೆಯಲ್ಲಿ ಹುಟ್ಟುಹಾಕಿದರು. ಬಸವಣ್ಣನವರು ತಾವು ಸ್ವತಃ ಬ್ರಾಹ್ಮಣವಂಶದಲ್ಲಿ ಹುಟ್ಟಿದ್ದರೂ ಬ್ರಾಹ್ಮಣ್ಯದ ಅಂದಿನ ಅಸಮಾನತೆಯ ಸಿದ್ಧಾಂತಗಳನ್ನು ವಿರೋಧಿಸಿ ಸಮಾನತೆಯ ನೆಲೆಯಲ್ಲಿ ಶರಣ ಧರ್ಮದ ಉದಯಕ್ಕೆ ಕಾರಣರಾದರು. ಆ ಮೂಲಕ ಆರ್ಥಿಕ ಅಸಮಾನತೆ, ಸಾಮಾಜಿಕ ಮೇಲುಕೀಳುಗಳನ್ನು, ಧಾರ್ಮಿಕ ವೈರುಧ್ಯಗಳನ್ನು ಹೋಗಲಾಡಿಸಿ ವೈಜ್ಞಾನಿಕವಾದ ವೈಚಾರಿಕವಾದ ನೆಲೆಯಲ್ಲಿ ಮಾನವೀಯವಾದ ಶರಣಧರ್ಮವನ್ನು ತರಲು ಕಂಕಣಬದ್ಧರಾದರು. ಜನತೆಗೆ ತಮ್ಮ ವಿಚಾರಗಳನ್ನು ಸರಳವಾದ ಸುಲಭವಾದ ವಚನಗಳ ಮೂಲಕ ತಿಳಿಹೇಳಿ ಸಾಹಿತ್ಯವನ್ನು ಸಾಮಾಜಿಕ ಬದಲಾವಣೆಯ ಮಹಾ ಅಸ್ತ್ರವನ್ನಾಗಿಸಿಕೊಂಡು ಅದನ್ನು ಸಾಮೂಹಿಕ ಚಳುವಳಿಯನ್ನಾಗಿಸಿದರು. ಕನ್ನಡ ಸಾಹಿತ್ಯದಲ್ಲಿ ವಚನಗಳನ್ನು ಒಂದು ವಿನೂತನ ಸಾಹಿತ್ಯ ಪ್ರಕಾರವೆಂದು ಕರೆಯಲಾಗುತ್ತದೆ. ಬಸವಣ್ಣನವರ ಅವರ ಪ್ರೇರಣೆಯಿಂದ ಅಸಂಖ್ಯ ಜನರು ಅವರ ಚಳುವಳಿಯಲ್ಲಿ ಪಾಲ್ಗೊಂಡು ಅಭೂತಪೂರ್ವವಾದ ಯಶಸ್ಸನ್ನು ಕಂಡರು. ಬಸವಣ್ಣನವರ ನೇತೃತ್ವವೇ ವಚನಸಾಹಿತ್ಯದ ಪ್ರಮುಖ ಪ್ರೇರಣೆಯಾಗಿ ಜನಮಾನಸದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿತು.

**ಆ) ವಚನ ಸಾಹಿತ್ಯ : ಉಗಮ – ವಿಕಾಸ – ಸ್ವರೂಪ**

ಪ್ರಾಚೀನ ಕನ್ನಡ ಸಾಹಿತ್ಯದ ದಿಕ್ಕನ್ನೆಲ್ಲ ಬದಲಿಸಿದ ಕೀರ್ತಿ ವಚನಸಾಹಿತ್ಯದ್ದು. ನಡುಗನ್ನಡಸಾಹಿತ್ಯ ಆರಂಭವಾಗುವುದೇ ವಚನಸಾಹಿತ್ಯದಿಂದ. ಇದರ ಉಗಮದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು ಇದರ ಉಗಮವನ್ನು ಸಂಸ್ಕೃತ ಸಾಹಿತ್ಯದಲ್ಲಿ, ಇನ್ನು ಕೆಲವರು ತಮಿಳು ಸಾಹಿತ್ಯದಲ್ಲಿ, ಮತ್ತೆ ಕೆಲವರು ದೇಶೀಸಾಹಿತ್ಯದಲ್ಲಿ ಗುರುತಿಸುವ ಪ್ರಯತ್ನಮಾಡಿದ್ದಾರೆ.

ರಂಗನಾಥ ದಿವಾಕರರವರು ವಚನಪ್ರಕಾರವು ಶರಣರಿಂದ ಸಹಜವಾಗಿ ಹೊರಹೊಮ್ಮಿದೆ ಎಂದಿದ್ದಾರೆ. ಡಿ.ಎಲ್.ಎನ್.ರವರು ವಚನಗಳಿಗೆ ತಮಿಳುಶೈವ ಹಾಡುಗಳು ಮೂಲ ಎಂದಿದ್ದಾರೆ. ಎಲ್.ಬಸವರಾಜುರವರು ಸಂಸ್ಕೃತದ ಸ್ತೋತ್ರ ಗದ್ಯ ಸಾಹಿತ್ಯವೇ ವಚನಗಳಿಗೆ ಮೂಲ ಎಂದಿದ್ದಾರೆ. ಎಂ.ಆರ್. ಶ್ರೀಯವರು ವಚನಸೃಷ್ಟಿಯ ಮೂಲಿಗರು ವಚನಕಾರರೇ ಎಂದಿದ್ದಾರೆ. ಎಂ.ಚಿದಾನಂದಮೂರ್ತಿಗಳು ಆರಂಭದಲ್ಲಿ ತ್ರಿಪದಿಗಳಲ್ಲಿ ಇದರ ಮೂಲವನ್ನು ಗುರುತಿಸಿ, ಅನಂತರ ಅವು ಸ್ವತಂತ್ರ ಸೃಷ್ಟಿಗಳೆಂದಿದ್ದಾರೆ. ರಂ.ಶ್ರೀ. ಮುಗಳಿಯವರು ವಚನಸಾಹಿತ್ಯ ಕನ್ನಡದ ಸ್ವಾರ್ಜಿತ ಸೊತ್ತು ಎಂದಿದ್ದಾರೆ. ಒಟ್ಟಿನಲ್ಲಿ ವಚನಕಾರರೇ ವಚನಗಳ ಮೂಲಿಗರು ಎನ್ನಬಹುದು.

ವಚನಗಳ ಸೃಷ್ಟಿಗೆ ಕಾರಣವಾದ ಅಂದಿನ ಸಾಮಾಜಿಕ, ಧಾರ್ಮಿಕ, ರಾಜಕೀಯ, ಹಿನ್ನೆಲೆಗಳನ್ನು ಗಮನಿಸುವುದಾದರೆ ೧೧-೧೨ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ರಾಜಮನೆತನಗಳು ರಾಜ್ಯಕ್ಕಾಗಿ ಬಡಿದಾಡುತ್ತಾ ಜನಸಾಮಾನ್ಯರನ್ನು ಮರೆತಿದ್ದವು. ಜೈನ ಬೌದ್ಧ ವೈದಿಕಧರ್ಮಗಳು ತಂತಮ್ಮ ಮೂಲೋದ್ದೇಶಗಳನ್ನು ಮರೆತು ಸಂಪ್ರದಾಯಗಳಿಗೆ ಬಲಿಯಾಗಿದ್ದವು. ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಸಮಾಜದ ಉದ್ಧಾರದಲ್ಲಿ ಆಸ್ಥೆ ಹೊಂದಿದ್ದ ಜನರೇ ಮಲಗಿದ್ದ ಜನತೆಯನ್ನು ಬಡಿದೆಬ್ಬಿಸುವ

ಕಾರ್ಯಮಾಡಬೇಕಾಯಿತು. ತಮಿಳ್ನಾಡಿನಲ್ಲಿ ಆರಂಭವಾಗಿದ್ದ ಭಕ್ತಿಯ ಆಂದೋಲನ ಕರ್ನಾಟಕದ ಮೂಲಕ ರಾಷ್ಟ್ರಾದ್ಯಂತ ವ್ಯಾಪಿಸಿತು. ಇದರ ಫಲವಾಗಿ ಕರ್ನಾಟಕದಲ್ಲಿ ವಚನಕಾರರು ಉದಯವಾದರು. ಅವರ ಸಮಾಜೋದ್ಧಾರದ ಉಪಉತ್ಪನ್ನವಾಗಿ ವಚನಸಾಹಿತ್ಯ ಉದಯಿಸಿತು.

ದೇಶೀಯ ಛಂದಸ್ಸೇ ಕನ್ನಡ ಸಾಹಿತ್ಯದ ತಲಕಾವೇರಿಯಾಗಿದ್ದರೂ, ಮಧ್ಯೆ ಕೆಲವು ಕಾಲ ರಾಜಾಶ್ರಯದಲ್ಲಿ ಅದು ಪಂಡಿತರ ಸೊತ್ತಾಗಿ ಸಾಮಾನ್ಯರನ್ನು ಮರೆತಾಗ, ಪುನಃ ಅದನ್ನು ದೇಶ್ಯಸಾಹಿತ್ಯದ ಕಡೆಗೇ ತಿರುಗಿಸಿ ವರ್ಣ, ವರ್ಗ, ಲಿಂಗ ಭೇದವಿಲ್ಲದ ವಚನಸಾಹಿತ್ಯವಾಗಿ ರೂಪುಗೊಳ್ಳಲು ವಚನಕಾರರು ಕಾರಣರಾದರು. ಈ ವಚನಗಳ ಉಗಮ ಯಾವಾಗ ಆಯಿತು ಎಂಬುದು ಅನಿಶ್ಚಿತವಾಗಿದೆ. ೧೧ನೆಯ ಶತಮಾನದ ಜೇಡರದಾಸಿಮಯ್ಯನೇ ಸದ್ಯಕ್ಕೆ ಆದ್ಯ ವಚನಕಾರನಾಗಿದ್ದಾನೆ. ಅವನಿಗಿಂತ ಪೂರ್ವದಲ್ಲಿಯೇ ಶರಣರ ನುಡಿಗಡಣಗಳಿತ್ತೆನ್ನಲು ಆಧಾರಗಳಿದ್ದರೂ ಅವು ದೊರೆತಿಲ್ಲ. ಹಾಗಾಗಿ ಜೇಡರದಾಸಿಮಯ್ಯನಿಂದ ಕಿರುತೊರೆಯಾಗಿ ಆರಂಭವಾದ ವಚನಸಾಹಿತ್ಯ ಬಸವೇಶ್ವರರ ಕಾಲಕ್ಕೆ ಮಹಾಪ್ರವಾಹದೋಪಾದಿಯಲ್ಲಿ ಏಕಕಾಲಕ್ಕೆ ನಾನೂರರಿಂದ ಐನೂರು ವಚನಕಾರರು ವಚನಗಳನ್ನು ರಚಿಸಿರುವುದು ವಿಶ್ವವಿಸ್ಮಯವಾಗಿದೆ. ೧೨ನೆಯ ಶತಮಾನ ವಚನಸಾಹಿತ್ಯದ ಸುವರ್ಣಯುಗ. ಹೀಗೆ ವಸ್ತು-ರೀತಿ-ಅಲಂಕಾರ-ರಸ ಎಲ್ಲ ದೃಷ್ಟಿಯಿಂದಲೂ ಸರ್ವತಂತ್ರ ಸ್ವತಂತ್ರವಾದ ವಚನ ಸಾಹಿತ್ಯ ಸೃಷ್ಟಿಯಾದುದು ಮಾತ್ರವಲ್ಲ, ಅದು ಕನ್ನಡ ಸಾಹಿತ್ಯದ ಹೊಸ ಮನ್ವಂತರವನ್ನೇ ಆರಂಭಿಸಿತು. ಅದು ವಿಪುಲವಾಗಿ ವಿಸ್ತಾರವಾಗಿ ಬೆಳೆದು ವಚನಸಾಹಿತ್ಯ ಒಂದು ವಿಶಿಷ್ಟಪ್ರಕಾರವಾಯಿತು. ಅದು ಜನಸಾಮಾನ್ಯರ ಆಸರೆಯೊಂದಿಗೆ ಸಮೃದ್ಧವೂ ಆಯಿತು.

ವಚನಗಳ ಮೂಲದ ಬಗ್ಗೆ ವಿವಿಧ ಅಭಿಪ್ರಾಯಗಳಿರುವಂತೆ ಅದರ ಸ್ವರೂಪದ ಬಗ್ಗೆಯೂ ವಿವಿಧ ಅಭಿಪ್ರಾಯಗಳಿವೆ. ಶಿ.ಶಿ. ಬಸವನಾಳರು ಕಂದಪದ್ಯಗಳಂತೆ ಇವು ಛಂದೋಬದ್ಧವಲ್ಲವಾದರೂ ಗದ್ಯದಂತೆ ಸ್ವಚ್ಛಂದವೂ ಅಲ್ಲ; ಆದರೂ ಇದರ ಲಯಬದ್ಧತೆಯಿಂದಾಗಿ ವಚನಗಳನ್ನು ಹಾಡುಗಳೆನ್ನಬಹುದು; ಸರಳ ನೇರ ಖಚಿತತೆಯಿಂದ ಗದ್ಯದ ವಿಶಿಷ್ಟಮಾದರಿಯೂ ಆಗಿದೆ; ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯಪದ್ಯದ ನಡುವಿನ ಒಂದು ಮಾದರಿ ಎಂದಿದ್ದಾರೆ. ಬಹುಮಟ್ಟಿಗೆ ಎಲ್ಲ ವಿದ್ವಾಂಸರೂ ಇದೇ ಅಭಿಪ್ರಾಯವನ್ನು ಹೇಳಿದ್ದಾರೆ.

ತಮ್ಮ ಸುತ್ತಮುತ್ತಲ ಸಮಾಜದ ಉದ್ಧಾರಕ್ಕಾಗಿ ಅದರ ಲೋಪದೋಷಗಳನ್ನು ಹೇಳುತ್ತಾ ಉದ್ಧಾರದ ಮಾರ್ಗದಲ್ಲಿ ತಾವು ಸ್ವತಃ ನಡೆದು ತೋರಿಸುತ್ತಾ, ಅದನ್ನು ತಮ್ಮ ನುಡಿಗಳ ರೂಪದ ವಚನಗಳಲ್ಲಿ ಅಭಿವ್ಯಕ್ತಿಸಿದುದು ಅತ್ಯಂತ ವಿಶಿಷ್ಟವಾಗಿದೆ. ಅದು ಶರಣರ ಸಹಜ ಸೊಲ್ಲಾಗಿ ಎಲ್ಲರಿಂದ ಆಕರ್ಷಿತವಾಗಿ ಅಂದಿನ ಇಡೀ ಸಮಾಜವೇ ಆ ಪವಿತ್ರ ಮಹಾಮಣಿಹದಲ್ಲಿ ಪಾಲ್ಗೊಂಡು ಜನವಾಣಿ ದೇವವಾಣಿಯಾಯಿತು. ಅದರಲ್ಲಿ ಅಸಂಖ್ಯ ಶರಣಶರಣೆಯರು ಪಾಲ್ಗೊಂಡುದು ವಿಶ್ವವಿಸ್ಮಯವಾಗಿದೆ.

**ಇ) ಆಯ್ದ ವಚನಕಾರರು : ಜೀವನ ಮತ್ತು ಸಾಹಿತ್ಯ ಪರಿಚಯ**

**೧) ಜೇಡರ ದಾಸಿಮಯ್ಯ**

ಆದ್ಯವಚನಕಾರರಲ್ಲಿ ಜೇಡರದಾಸಿಮಯ್ಯನು ಪ್ರಮುಖನು. ಈತ ನೇಯ್ಗೆ ಕಾಯಕದವನು. ಈತನ ಕಾಲವು ಖಚಿತವಾಗಿ ಎಲ್ಲಿಯೂ ಉಕ್ತವಾಗಿಲ್ಲ. ಬಸವಣ್ಣನವರ ಕೆಲವು ವಚನಗಳಲ್ಲಿ ಈತ ಸ್ಮರಿಸಲ್ಪಟ್ಟಿರುವುದರಿಂದ ವಿದ್ವಾಂಸರು ಅವರ ಹಿರಿಯ ಸಮಕಾಲೀನ ಇರಬಹುದೆಂದು ಹೇಳಿದ್ದಾರೆ. ಮತ್ತೆ

ಕೆಲವರು ತೊರೆಯಲ್ಲಿ ಬಿದ್ದ ಲಿಂಗ ಕರಸ್ಥಳಕ್ಕೆ ಬಂದ ಕೊಂಡಗುಳಿ ಕೇಶಿರಾಜನ ಪ್ರಸಂಗ ಇವನ ವಚನಗಳಲ್ಲಿ ಬರುವುದರಿಂದ ಈತನ ಕಾಲ ಕೊಂಡಗುಳಿ ಕೇಶಿರಾಜನ ಕಾಲಕ್ಕೆ (ಕ್ರಿ.ಶ. ೧೦೮೦) ಸಮೀಪವೆನ್ನುತ್ತಾರೆ.

ಜೇಡರದಾಸಿಮಯ್ಯ ಮತ್ತು ದೇವರದಾಸಿಮಯ್ಯ ಇವರಿಬ್ಬರೂ ಭಿನ್ನರೋ ಅಭಿನ್ನರೋ ಎಂಬ ಚರ್ಚೆ ಪ್ರಾಚೀನವಾದುದು. ಹೆಚ್ಚಿನ ವಿದ್ವಾಂಸರು ಇಬ್ಬರೂ ಬೇರೆ ಬೇರೆ ಎನ್ನುತ್ತಾರೆ. ದಾಸಿಮಯ್ಯನ ಜೀವನಚರಿತ್ರೆ ಕನ್ನಡದ ಹಲವು ಗ್ರಂಥಗಳಲ್ಲಿ ನಿರೂಪಿತವಾಗಿವೆ. ಈತ ಗುಲ್ಬರ್ಗಾದ ಮುದನೂರಿನ ಕಾಮಯ್ಯ ಮತ್ತು ಶಂಕರಿ ದಂಪತಿಗಳ ಪುತ್ರ. ಈತ ವೃತ್ತಿಯಲ್ಲಿ ನೇಕಾರನಾಗಿದ್ದನು. ತನ್ನ ಊರಿನಲ್ಲಿಯೇ ನೆಲೆನಿಂತು ನೇಯ್ಗೆಯ ಕಾಯಕ–ದಾಸೋಹದೊಂದಿಗೆ ಜನರಿಗೆ ತಿಳುವಳಿಕೆ ಹೇಳುತ್ತಾ ಕಾಲಕಳೆಯುತ್ತಾನೆ.

ಜೇಡರದಾಸಿಮಯ್ಯನು ಗೃಹಸ್ಥಧರ್ಮ ಸ್ವೀಕರಿಸುವಾಗ ತನಗೆ ಅನುರೂಪಳಾದ ಸತಿಯನ್ನು ಪಡೆಯಲೋಸುಗ ನಾನಾ ಪರೀಕ್ಷೆಗಳನ್ನೊಡ್ಡಿ ಅದರಲ್ಲಿ ತೇರ್ಗಡೆಯಾದ ದುಗ್ಗಳೆಯನ್ನು ತನ್ನ ಬಾಳಸಂಗಾತಿಯಾಗಿ ಕೈಹಿಡಿಯುತ್ತಾನೆ. ಚರಮೂರ್ತಿಗಳೊಬ್ಬರು ಒಮ್ಮೆ ದಾಸಿಮಯ್ಯನನ್ನು ಸಂಸಾರ ಲೇಸೇ? ವಿರಕ್ತಿಲೇಸೇ? ಎಂದಾಗ ಆತ ಎದಿರು ಮಾತನಾಡದ ಮಡದಿ ಇದ್ದರೆ ಸಂಸಾರ ಲೇಸು? ಎದಿರು ಮಾತಾಡುವವಳಾದರೆ ವಿರಕ್ತಿ ಲೇಸು ಎನ್ನುತ್ತಾನೆ. ಇನ್ನೊಮ್ಮೆ ತಾನು ಬಹುದಿನ ನೇಯ್ದ ಅತ್ಯಂತ ಅದ್ಭುತ ಸುಂದರ ವಸ್ತ್ರವೊಂದನ್ನು ಸಂತೆಗೆ ಮಾರಲು ಒಯ್ದಾಗ ಅದಕ್ಕೆ ಅಪೂರ್ವ ಬೆಲೆಕಟ್ಟಿ ರಾಜಮಹಾರಾಜರೇ ಅದನ್ನು ಕೊಳ್ಳದೇ ಹೋದಾಗ, ಅದನ್ನು ವಾಪಸ್ಸು ತರುತ್ತಿರುವಾಗ ಶಿವನೇ ವೃದ್ಧಜಂಗಮನಾಗಿ ಬಂದು ಶೀತ ತಾಳಲಾರದೇ ನಡುಗುತ್ತಾ ಆ ದಿವ್ಯಾಂಬರವನ್ನು ಬೇಡಿ ಪಡೆಯುತ್ತಾನೆ. ಪಡೆದು ಅದನ್ನು ಚೂರು ಚೂರಾಗಿ ಸೀಳಿ ಅಲ್ಲಷ್ಟು ಇಲ್ಲಷ್ಟು ಸಿಕ್ಕಿಸಿಕೊಂಡು ಸಂತಸಪಡುತ್ತಾನೆ. ಅದನ್ನು ನೋಡಿಯೂ ದಾಸಿಮಯ್ಯನು ಅವರಿಚ್ಛೆಯ ಪದಾರ್ಥವನ್ನು ಅವರಿಚ್ಛೆ ಬಂದಂತೆ ಮಾಡಲೆಂದು ಆತನನ್ನು ತಮ್ಮ ಮನೆಗೆ ಕರೆದೊಯ್ದು ಊಟೋಪಚಾರ ಮಾಡಿದಾಗ ಶಿವ ಅವನಿಗೊಂದು ತವನಿಧಿಯನ್ನು ಕೊಟ್ಟು ಹೋಗುತ್ತಾನೆ.

ತವನಿಧಿ ಪಡೆದ ಮೇಲೆ ದಾಸಿಮಯ್ಯ ಅಹಂಕಾರಿಯಾಗುತ್ತಾನೆ. ಅದನ್ನು ಹೋಗಲಾಡಿಸಬೇಕೆಂದು ಶಿವನೇ ಶಂಕರದಾಸಿಮಯ್ಯನನ್ನು ಅವನ ಬಳಿ ಕಳುಹಿಸಿದಾಗ ಅವನು ನೀನು ನಿನ್ನ ಭಕ್ತರಾರೂ ಭಿಕ್ಷೆಗೆ ಹೋಗಬೇಕಾಗಿಲ್ಲ, ತಾನೇ ಸಾವಿರ ಹೇರು ಪಡಿಪದಾರ್ಥ ಕಳಿಸುವೆನೆಂದು ಗರ್ವದಿಂದ ನುಡಿದಾಗ ಶಂಕರದಾಸಿಮಯ್ಯನು ಅದನ್ನು ತಿರಸ್ಕರಿಸಿ ತನ್ನ ಮನೆಯ ಮುಂದಿನ ತಿಪ್ಪೆಯನ್ನು ಕೆದಕಿಸಿ ಅಲ್ಲಿರುವ ಹೊನ್ನನ್ನು ತೋರಿಸಿ ನಿನಗೆ ಬೇಕಾದಷ್ಟು ತೆಗೆದುಕೋ, ನಿನ್ನ ಬಳಿಯ ತವನಿಧಿ ಇಲ್ಲವಾಗುವುದು ಎನ್ನುವನು. ಆಗ ಮನೆಗೆ ಹಿಂದಿರುಗಿದಾಗ ಅಲ್ಲಿ ತವನಿಧಿ ಕಾಣದೆ ಪಶ್ಚಾತ್ತಾಪಪಟ್ಟು ಶಂಕರದಾಸಿಮಯ್ಯನ ಬಳಿ ಕ್ಷಮೆ ಯಾಚಿಸಲು ಆತ ಪುನಃ ಅದನ್ನು ಅನುಗ್ರಹಿಸುತ್ತಾನೆ.

ದಾಸಿಮಯ್ಯನವರ ೧೭೬ವಚನಗಳು ಇಂದು ನಮಗೆ ದೊರಕಿವೆ. 'ರಾಮನಾಥಾ' ಇವರ ವಚನಗಳ ಅಂಕಿತವಾಗಿದೆ. ಅದು ಅವರ ಇಷ್ಟದೈವವಾಗಿದೆ. ಅತ್ಯಂತ ಸರಳವಾದ ಆಡುಭಾಷೆಯಲ್ಲಿ, ಚಿಕ್ಕಚಿಕ್ಕ ವಾಕ್ಯಗಳಲ್ಲಿ ಗಹನವಾದ ತತ್ವವನ್ನು ಅದ್ಭುತವಾಗಿ ಹೇಳಬಲ್ಲ ಸಿದ್ಧಿ ಅವರದು. ಶರಣರ ಸೂಳ್ನುಡಿಗಳಿಗೆ ಅವರು ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ದೈವದ ಸ್ವರೂಪ, ಮಹಿಮೆ, ಗುರುವಿನ ಮಹತ್ವ, ಭಕ್ತರ ಹಿರಿಮೆ, ಸ್ತ್ರೀಯರ ಹಿರಿಮೆ, ಆಡಂಬರಗಳ ಖಂಡನೆ, ನೀತಿಬೋಧೆಗಳಿಂದ ಅವರ ವಚನ ತುಂಬಿ ತುಳುಕುತ್ತಿವೆ.

**ಇಳೆ ನಿಮ್ಮ ದಾನ ಬೆಳೆ ನಿಮ್ಮದಾನ**
**ಸುಳಿದು ಸೂಸುವ ವಾಯು ನಿಮ್ಮ ದಾನ**
**ನಿಮ್ಮ ದಾನವನುಂಡು ಅನ್ಯರ ಹೊಗಳುವ**
**ಕುನ್ನಿಗಳನೇನೆಂಬೆ ರಾಮನಾಥಾ**

ಈ ವಚನವು ಮನುಷ್ಯರ ಅಜ್ಞಾನ ದುರ್ಬುದ್ಧಿಯನ್ನು ಕುರಿತಾಗಿದೆ. ಹೀಗೆ ಇವರ ವಚನಗಳು ತಮ್ಮ ಸರಳತೆಯಿಂದ ಓದುಗರ ಮನಮುಟ್ಟುವಂತಿವೆ. ಜೊತೆಗೆ ವಿಶೇಷವಾದ ಕಾವ್ಯಗುಣಗಳಿಂದ ಕೂಡಿವೆ. ಆಕೃತಿಯಲ್ಲಿ ಇವರ ವಚನಗಳು ಚಿಕ್ಕದಾಗಿದ್ದರೂ ಸೂತ್ರರೂಪವಾಗಿದ್ದು ಉತ್ಕೃಷ್ಟವಾಗಿವೆ. ಅವರ ಜೀವನವೂ ಬಹು ದೊಡ್ಡ ಸಂದೇಶವಾಗಿದೆ.

ಜೇಡರದಾಸಿಮಯ್ಯನವರು ಮುಂಬರುವ ಆಧ್ಯಾತ್ಮಿಕ ಕ್ರಾಂತಿಗೆ ಬೀಜಬಿತ್ತಿದವರು. ಬಸವಪೂರ್ವಯುಗದ ಶರಣರಲ್ಲಿ ಅಗ್ರಗಣ್ಯರು, ಕಾಯಕನಿಷ್ಠರಾಗಿ, ದಾಸೋಹನಿರತರಾಗಿ, ಧರ್ಮಬೋಧಕರಾಗಿ, ಧರ್ಮದ ತಿರುಳನ್ನು ತಿರುಳ್ಗನ್ನಡದಲ್ಲಿ ಬೋಧಿಸುವ ವಚನಕಾರರಾಗಿ ಕನ್ನಡಸಾಹಿತ್ಯ ಮತ್ತು ಜನಜೀವನದ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ವಚನಸಾಹಿತ್ಯದ ಉಗಮದ ಅನ್ವೇಷಣೆಯಲ್ಲಿ ಈತನೇ ಮೊಟ್ಟಮೊದಲಿನ ವಚನಕಾರನಾಗಿದ್ದಾನೆ. ಈ ಅರ್ಥದಲ್ಲಿ ಈತ ವಚನಸಾಹಿತ್ಯ ಪ್ರವರ್ತಕ. ಇವರ ವಚನಗಳ ಪ್ರೌಢಿಮೆ ಪರಿಣತಿ ನೋಡಿದರೆ ಹಾಗೂ ಇವರ ವಚನಗಳಲ್ಲಿ ಬರುವ 'ಶರಣರ ಸೂಳ್ನುಡಿ' ಎಂಬ ಉಲ್ಲೇಖಗಳಿಂದಲೂ ಇವರಿಗಿಂತ ಹಿಂದೆಯೇ ಈ ಪ್ರಕಾರ ಬೆಳೆದು ಬಂದಂತೆ ತೋರುತ್ತದೆ.

## ೨. ಅಲ್ಲಮಪ್ರಭು

ಬಸವಣ್ಣನವರ ಸ್ವತಂತ್ರ ಮನೋಧರ್ಮದ ವಿಚಾರಕ್ರಾಂತಿಗೆ ಜ್ಞಾನವೈರಾಗ್ಯಗಳ ಕಾಂತಿಯನ್ನಿತ್ತು ಅದನ್ನು ಮುನ್ನಡೆಸಿದ ಮಹಾವ್ಯಕ್ತಿ ಅಲ್ಲಮಪ್ರಭು ಅಥವಾ ಪ್ರಭುದೇವ. ವ್ಯಕ್ತಿತ್ವದ ಮಿತವಲಯವನ್ನು ಮೀರಿನಿಂತು ಯಾವ ಸಂಪ್ರದಾಯದ ಕಟ್ಟಿಗೂ ಸಿಕ್ಕದೆ, ಮಾನವತೆಯು ಸಾಧಿಸಬಹುದಾದ ಅತ್ಯುನ್ನತ ನಿಲವನ್ನು ಸಹಜಸ್ಥಿತಿಯನ್ನಾಗಿ ಅಳವಡಿಸಿಕೊಂಡು ಅದನ್ನು ಜಗತ್ಕಲ್ಯಾಣಕ್ಕಾಗಿ ಸಾರಿದವನು ಅಲ್ಲಮಪ್ರಭು. ಪ್ರಸಿದ್ಧಿಯ ದೃಷ್ಟಿಯಿಂದ ಕನ್ನಡ ನಾಡಿಗೆ ಅದು ಸೀಮಿತವಾಗಿದ್ದರೂ ಯೋಗ್ಯತೆಯ ದೃಷ್ಟಿಯಿಂದ ವಿಶ್ವವ್ಯಾಪಕವಾಗಬಲ್ಲ ಮಹತ್ವವನ್ನು ಪಡೆದಿದೆ.

'ಅಲ್ಲಮ' ಎಂಬ ಶಬ್ದದ ನಿಷ್ಪತ್ತಿಯ ಬಗ್ಗೆಯೇ ಚರ್ಚೆ ನಡೆದಿದೆ. ಅಲ್ಲಮಪ್ರಭುವಿನ ನಿಜವಾದ ಹೆಸರು ಅಲ್ಲಮನೋ, ಅಲ್ಲಯ್ಯನೋ ಎಂಬ ವಿಷಯದಲ್ಲಿಯೂ ಚರ್ಚೆ ನಡೆದಿದೆ. ಅದು ಅರಬ್ಬಿ ಭಾಷೆಯ 'ಅಲ್ಲಾಮ' ಎಂಬ ಪದದಿಂದಲೂ ಬಂದಿರಬಹುದೆಂದು ಕೆಲವರು ಊಹಿಸಿದ್ದಾರೆ. 'ಅಲ್ಲಯ್ಯ'ನೆಂದರೆ 'ನಿರ್ಮಾಯ'ನೆಂದೂ ಹೇಳಿದ್ದಾರೆ.

ಅಲ್ಲಮನ ಜೀವನದ ವಿಚಾರವಾಗಿ ನಿರ್ದಿಷ್ಟವಾಗಿ ಹೇಳಬಹುದಾದ ಚಾರಿತ್ರಿಕ ಅಂಶಗಳು ತಿಳಿದಿರುವುದು ತುಂಬಾ ಕಡಿಮೆ. ಅವನನ್ನು ಕುರಿತು ಕನ್ನಡ, ತೆಲುಗು, ತಮಿಳು, ಮರಾಠಿ ಮತ್ತು ಸಂಸ್ಕೃತಗಳಲ್ಲಿ ರಚಿತವಾಗಿರುವ ಕಾವ್ಯಗಳು ಆತನ ವ್ಯಕ್ತಿತ್ವವನ್ನೂ ಮಹತ್ವವನ್ನೂ ಸಾಂಕೇತಿಕವಾಗಿ ನಿರೂಪಿಸಲು ಪ್ರಯತ್ನಿಸಿವೆಯೇ ಹೊರತು ಚಾರಿತ್ರಿಕ ಅಂಶಗಳಿಗೆ ವಿಶೇಷ ಗಮನ ಕೊಟ್ಟಂತೆ ತೋರುವುದಿಲ್ಲ. ಅಲ್ಲದೆ ಆತನ ವಚನಗಳಲ್ಲಿಯೂ ಸ್ವವಿಷಯದ ಬಗೆಗೆ ಹೆಚ್ಚಿನ ಮಾಹಿತಿಗಳು ಸಿಗುವುದಿಲ್ಲ. ಲೌಕಿಕ ವ್ಯಕ್ತಿತ್ವವನ್ನು ದಾಟಿದ ಅತೀತ ನಿಲವಿನಲ್ಲಿಯೇ ನಿಂತಿವೆ ಆತನ ವಚನಗಳು. ಆದರೂ ಆ ವಚನಗಳಲ್ಲಿ ರೂಪುಗೊಂಡ ಆತನ ವ್ಯಕ್ತಿತ್ವದ ಹಿನ್ನೆಲೆಯನ್ನು ಗಮನಿಸಿ, ಮತ್ತು ಅವನನ್ನು ಕುರಿತು ಕಾವ್ಯಗಳಲ್ಲಿ ಬರುವ ಕೆಲವು ಅಂಶಗಳನ್ನು ಆಧರಿಸಿ ಆತನ ಜೀವನದ ಬಗ್ಗೆ ಹೀಗೆ ಹೇಳಬಹುದು.

ಶಿವಮೊಗ್ಗ ಜಿಲ್ಲೆಯ ಇತಿಹಾಸ ಪ್ರಸಿದ್ಧವಾದ ಬಳ್ಳಿಗಾವಿ ಅಲ್ಲಮಪ್ರಭುವಿನ ಜನ್ಮಸ್ಥಳ. ತಂದೆ ನಿರಹಂಕಾರ, ತಾಯಿ ಸುಜ್ಞಾನಿ. ಇವು ನಿಜವಾದ ಹೆಸರುಗಳೋ ಅಥವಾ ನಿರಹಂಕಾರ ಸುಜ್ಞಾನಗಳಿಂದ ಮಾತ್ರವೇ

ಅಲ್ಲಮಪ್ರಭುವಿನಂತಹ ವ್ಯಕ್ತಿತ್ವ ಮೂಡಬಲ್ಲದೆಂಬ ಸಾಂಕೇತಿಕ ಸೂಚನೆಯೂ ತಿಳಿಯದು. ಅಂತೂ ಪ್ರಭುದೇವನ ತಂದೆ ಬಳ್ಳಿಗಾವೆಯಲ್ಲಿ 'ನಾಗವಾಸಾಧಿಪತಿ'ಯಾಗಿದ್ದನೆಂಬ ಮಾತು ಬರುತ್ತದೆ. ಅಂದರೆ 'ನಾಗವಾಸ' ದೇವದಾಸಿಯರ ವರ್ಗವೆಂತಲೂ ಅವನನ್ನು ಅದರ ಮೇಲ್ವಿಚಾರಕನೆಂತಲೂ ವಿವರಣೆ ಕೊಟ್ಟಿದ್ದಾರೆ.

ಅಲ್ಲಮನ ಕಾಲದ ವಿಚಾರದಲ್ಲಿ ಪುರಾಣ, ಕಾವ್ಯಗಳಲ್ಲಿ ಯಾವ ಸೂಚನೆಯೂ ಇಲ್ಲದ, ಆದರೆ ಆತನು ೧೨ನೆಯ ಶತಮಾನದ ಶರಣ ಸಮೂಹದಲ್ಲಿ ಮೇರುಸದೃಶ ವ್ಯಕ್ತಿಯಾಗಿದ್ದನೆಂಬುದನ್ನು ಯಾವ ಸಂದೇಹಕ್ಕೂ ಅವಕಾಶವಿಲ್ಲದಂತೆ ಅವು ಸ್ಪಷ್ಟಪಡಿಸುತ್ತವೆ. ಅಲ್ಲಮ ಬಸವಣ್ಣನವರ ಹಿರಿಯ ಸಮಕಾಲೀನನೆಂದೂ ಸು.೧೧೬೦ರಲ್ಲಿದ್ದನೆಂದೂ ಇಟ್ಟುಕೊಳ್ಳಬಹುದು.

ಅಲ್ಲಮನ ಬಾಲ್ಯಜೀವನದ ಪರಿಸರಗಳಾಗಲಿ, ಮನೋವಿಕಾಸದ ಚಿತ್ರಗಳಾಗಲಿ ನಮಗೆ ಸಿಗುವುದಿಲ್ಲ. ಆದರೆ ಈತನ ಜೀವನದಲ್ಲೊಂದು ಪರಿವರ್ತನೆಯ ಘಟ್ಟ ತಾರುಣ್ಯದಲ್ಲಿ ಘಟಿಸಿದಂತೆ ತೋರುತ್ತದೆ. ಅದು ಹರಿಹರ ಹೇಳುವಂತೆ ಬಳ್ಳಿಗಾವೆಯ ಕಾಮಲತೆಯೇ ಆಗಿರಲಿ ಅಥವಾ ಚಾಮರಸ ಹೇಳುವಂತೆ ಬನವಾಸಿಯ ಮಾಯಾದೇವಿಯೇ ಆಗಿರಲಿ ಅಂತೂ ಸಂಸಾರವನ್ನು ಮೆಟ್ಟಿಮೇಲೇರುವ ಸಾಧನೆಗೆ ಪ್ರಭುವನ್ನು ಪ್ರಚೋದಿಸಿದ ಒಂದು ಘಟನೆ ನಡೆದಿರಬೇಕು. ಅದರಿಂದ ಪ್ರಭುದೇವನಿಗೆ ತನ್ನ ಹೃದಯದ ಅಂತರಾಳದಲ್ಲಿ ಅಡಗಿದ್ದ ಅತೀವವಾದ ಆಕಾಂಕ್ಷೆಯ ಅರಿವು ಕಣ್ದೆರೆದಂತೆ ತೋರುತ್ತದೆ. ತನ್ನ ಸಹಜ ಸ್ವರೂಪದ ವಿಕಾಸಕ್ಕಾಗಿ ಪ್ರಭುವಿನ ಮನಸ್ಸು ಹಂಬಲಿಸಿ ಎಲ್ಲರಂತೆ ಲೌಕಿಕ ಸಂಸಾರದ ವಿಷಯಸುಖಗಳಲ್ಲಿ ಆನಂದವನ್ನು ಪಡೆಯಲಾರದೇ ಹೋಗುತ್ತದೆ. ಆದುದರಿಂದ ಅದನ್ನು ತ್ಯಜಿಸಿ ಅಗಾಧವಾದ ಸಾಧನೆಯನ್ನು ಪ್ರಭುದೇವ ಕೈಗೊಂಡಂತೆ ತೋರುತ್ತದೆ.

ಅಲ್ಲಮನ ಜೀವನದಲ್ಲಿ ನಾವು ಸ್ಪಷ್ಟವಾಗಿ ಕಾಣಲಾಗದ ಸಾಧಕನ ಜೀವನದ ಕಾಳರಾತ್ರಿಯ ಭಾಗ ಈ ಮೇಲಿನದು. ಅಂತಹ ಸ್ಥಿತಿಯನ್ನು ಅನುಭವಿಸಿ, ತನ್ನ ಸಾಧನೆಯಿಂದ ಅದನ್ನು ದಾಟಿ ಮೇಲೇರಿರಬೇಕು. ಆದರೆ ಬಸವಣ್ಣನವರಲ್ಲಿ ಕಾಣುವಂತೆ ಆ ವಿಕಾಸದ ಚಿತ್ರ ಪ್ರಭುವಿನ ವಚನಗಳಲ್ಲಿ ಅಷ್ಟಾಗಿ ಕಾಣುವುದಿಲ್ಲ. ಅತೀತವಾದ ನಿಲುವಿನಲ್ಲಿಯೇ ಅವು ಹೆಚ್ಚಾಗಿ ನಿಂತಿವೆ. ಆದರೂ ಅಂತಹ ತಳಮಳದ ಸ್ಥಿತಿಯನ್ನು ಆತನು ದಾಟಿ ಬಂದಿರುವುದನ್ನು ಕಂಡುಕೊಳ್ಳುವುದಕ್ಕೆ ಸಾಕಷ್ಟು ಸೂಚನೆಗಳಿವೆ. ಅಲ್ಲದೆ ಆತನಲ್ಲಿ ಕಾಣುವ ಯೋಗಸಮನ್ವಯದ ಪರಿಣತಿ ಆಶ್ಚರ್ಯಕರವಾದುದು. ಹಠಯೋಗ, ರಾಜಯೋಗ ಮೊದಲಾದ ಎಲ್ಲ ಯೋಗಗಳಲ್ಲಿಯೂ ನಡೆದು ಅವುಗಳ ಆಚೆಗೆ ಶಿವಯೋಗದತ್ತ ಸಾಗಿದುದರ ಚಿತ್ರವನ್ನು ಆತನ ವಚನಗಳು ಕೊಡುತ್ತವೆ. ಪರಿವ್ರಾಜಕ ಸನ್ಯಾಸಿಯಾಗಿ ಭಾರತದಾದ್ಯಂತ ಆತ ಸಂಚರಿಸಿರಬೇಕು. ನೂರಾರು ಸಾಧಕರನ್ನು ಸಂಧಿಸಿ ಅನೇಕ ಬಗೆಯ ಅನುಭವಗಳನ್ನು ಪಡೆದಿರಬೇಕು. ಆದರೆ ಯಾವುದೂ ಆತನಿಗೆ ತೃಪ್ತಿಯನ್ನು ಕೊಟ್ಟಂತೆ ತೋರುವುದಿಲ್ಲ. ಭೂಮವಾದುದನ್ನು ಬಯಸಿದವನು ಆತ. ಆ ಆಧ್ಯಾತ್ಮ ಅನುಭವದ ಉತ್ತುಂಗ ನಿಲವನ್ನು ಆತನಿಗೆ ತಂದುಕೊಟ್ಟವನು ಅನಿಮಿಷಯೋಗಿ. ಎಲ್ಲ ಯೋಗಗಳ ರಹಸ್ಯವನ್ನು ಅರಿತ ಅಲ್ಲಮನ ಸಾಧನೆಯ ಕೊನೆಯ ಹಂತದಲ್ಲಿ ಆತನಿಗೆ ಅನಿಮಿಷನ ದರ್ಶನವಾಗಿ ಶಿವಯೋಗದ ಸ್ವರೂಪವನ್ನು ಆತನಿಂದ ಅರಿತುಕೊಂಡು ತನ್ನ ಬದುಕಿನ ಗುರಿಯನ್ನು ಅರಿತುಕೊಳ್ಳುತ್ತಾನೆ. ಈ ಸನ್ನಿವೇಶವನ್ನು 'ಶೂನ್ಯಸಂಪಾದನೆ' ಬಹಳ ಚೆನ್ನಾಗಿ ಚಿತ್ರಿಸಿದೆ. ಕೊನೆಗೆ ಅನಿಮಿಷ ಯೋಗಿಯ ಕರಸ್ಥಲದ ಲಿಂಗ ಪ್ರಭುದೇವರ ಹಸ್ತಪೀಠವನ್ನು ಸೇರುತ್ತದೆ. 'ಗುಹೇಶ್ವರನೆಂಬ ಲಿಂಗವು ನಿರಾಕಾರವಾದ ಬಯಲು, ಅದು ಸಾಕಾರವಾಗಿ ಮುನ್ನ ಕರಸ್ಥಲಕ್ಕೆ ಬಂದರೆ ಹೇಳಲಮ್ಮೆ ಕೇಳಲಮ್ಮೆ' ಎಂದು ಇಷ್ಟಲಿಂಗದ ಮಹತ್ತಿನಲ್ಲಿ ಅವನ ಮನಸ್ಸು ಪರವಶವಾಗಿ ಅವನ ಅಂಗವೆಲ್ಲಾ ನಷ್ಟವಾಗಿ ಲಿಂಗದಲ್ಲಿ ಲೀಯವಾಗುತ್ತದೆ. ಅಲ್ಲಮ ದೀಪವನ್ನು ಮುಟ್ಟಿದ ದೀಪದಂತೆ ಪೂರ್ಣತೆಯನ್ನು ಪಡೆದು ತಾನೂ ಪರಿಪೂರ್ಣನಾಗಿ ಪರಿಣಮಿಸುತ್ತಾನೆ.

ಇದು ಅಲ್ಲಮಪ್ರಭುವಿನ ಜೀವನದಲ್ಲಿ ಒಂದು ಘಟ್ಟ. ಮುಂದೆ ಸಾಧಕರ ಉದ್ಧಾರಕ್ಕಾಗಿ ಆತ ಸಂಚಾರವನ್ನು ಕೈಗೊಳ್ಳುತ್ತಾನೆ. ಆತ ನಡೆದುದೆ ಮಾರ್ಗವಾಗುತ್ತದೆ, ನುಡಿದುದೇ ಮಂತ್ರವಾಗುತ್ತದೆ. ಆ ಮಹಾಪೂರದಲ್ಲಿ ಕೆರೆ ಹಳ್ಳ ಕೊಳ್ಳ ಸರೋರವರಗಳು ತಮ್ಮ ಅರಕೆಯನ್ನು ತುಂಬಿಕೊಳ್ಳುತ್ತವೆ. ಸಾಧಕರ ಮನೋಧರ್ಮಕ್ಕೆ ಅನುಗುಣವಾಗಿ ಅವರ ಮಟ್ಟದಲ್ಲಿ ನಿಂತು ಅಲ್ಲಿಂದ ಮುಂದೆ ಅವರನ್ನು ಕೊಂಡೊಯ್ಯುವ ಆತನ ಅದ್ಭುತ ಶಕ್ತಿಯನ್ನು 'ಶೂನ್ಯಸಂಪಾದನೆ' ಚಿತ್ರಿಸಿದೆ. ಅಣ್ಣನನ್ನು ಕಳೆದುಕೊಂಡು ಗೋಳಾಡುತ್ತಿರುವ ಮುಕ್ತಾಯಕ್ಕನನ್ನು ಎಚ್ಚರಿಸುವ ರೀತಿ ಒಂದಾದರೆ, ಯೋಗದ ಕೊನೆಯ ಹಂತದಲ್ಲಿ ನಿಂತು 'ಸಾಕಾರನಿಷ್ಠೆ ಭೂತಂಗಳೊಳಗನುಕಂಪೆ'ಯ ಸೂತ್ರದಲ್ಲಿ ಸಿಕ್ಕಿದ್ದ ಸಿದ್ಧರಾಮನನ್ನು ಶಿವಯೋಗಿಯನ್ನಾಗಿ ಮಾಡುವ ರೀತಿಯೇ ಇನ್ನೊಂದು. ಹಾಗೆಯೇ ಹಠಯೋಗದ ಸಿದ್ಧಿಗಳೇ ಸರ್ವಸ್ವವೆಂಬ ಭ್ರಮೆಗಳೊಳಗಾದ ಗೋರಕ್ಷನನ್ನು ಎಚ್ಚರಿಸಿದ ಬಗೆಯಂತೂ ಅಲ್ಲಮನ ವ್ಯೋಮಕಾಯದ ಸಿದ್ಧಿಗೆ ಸಾಕ್ಷಿಯಾಗಿದೆ.

ಇವೆಲ್ಲಕ್ಕಿಂತ ಹೆಚ್ಚಾಗಿ ಆ ಯುಗದ ಇನ್ನೊಂದು ಮಹಾಶಕ್ತಿಯ ಹಾರೈಕೆ ಪ್ರಭುದೇವನನ್ನು ಆಕರ್ಷಿಸಿತು. ಸೊನ್ನಲಾಪುರದಿಂದ ಸಿದ್ಧರಾಮನನ್ನು ಒಳಗೊಂಡು ಅಲ್ಲಮಪ್ರಭು ಕಲ್ಯಾಣಕ್ಕೆ ಬಂದಂತೆ ತಿಳಿದುಬರುತ್ತದೆ. ಬಸವಣ್ಣನವರಂತೂ ಅಲ್ಲಮಪ್ರಭುದೇವನಿಗೆ ಅನನ್ಯಭಾವದಿಂದ ಶರಣಾಗುತ್ತಾರೆ. ಬಸವಣ್ಣನವರ ಪ್ರಾರ್ಥನೆಗೆ ಮಣಿದು ಪ್ರಭು ಕಲ್ಯಾಣದಲ್ಲಿ ಕೆಲವು ಕಾಲ ಇರುತ್ತಾನೆ. ಎಲ್ಲಿಯೂ ನಿಲ್ಲದೆ ಜಗದ್ಭರಿತ ಜಂಗಮವಾಗಿ ಸದಾ ಸಂಚಾರವನ್ನು ಕೈಗೊಂಡಿದ್ದ ಅಲ್ಲಮಪ್ರಭು ಕಲ್ಯಾಣದಲ್ಲಿ ನಿಂತು ಅನುಭವಮಂಟಪದ ಅಗ್ರಾಸನವನ್ನು ಅಲಂಕರಿಸಿ ಅಲ್ಲಿನ ಅನುಭಾವ ಗೋಷ್ಠಿಗಳಿಗೆ ಹೊಸಚೈತನ್ಯವನ್ನು ತಂದುಕೊಟ್ಟನು. ಸತ್ಯವನ್ನು ನಿಷ್ಠುರವಾಗಿ ಹೇಳಿ ಸಾಧಕರನ್ನೂ ಚುಚ್ಚಿ ಎಚ್ಚರಿಸಿದನು. ಕೆಲವು ಕಾಲ ಈ ಕರ್ತವ್ಯವನ್ನು ನಿರ್ವಹಿಸಿದ ಮೇಲೆ ಸಹಜ ಜಂಗಮನಾದ ಈತ ಮತ್ತೆ ಸಂಚಾರವನ್ನು ಕೈಗೊಳ್ಳಲು ನಿರ್ಧರಿಸುತ್ತಾನೆ. ಮತ್ತೆ ಬರುವುದಾಗಿ ಹೇಳಿ ಕಲ್ಯಾಣದಿಂದ ಹೊರಟು ಇಡೀ ಭಾರತದ ಸಂಚಾರವನ್ನು ಕೈಗೊಂಡನೆಂದು ಹೇಳಿ ಆಯಾ ಸ್ಥಳಗಳನ್ನೆಲ್ಲಾ ಸಿದ್ಧವೀರಣ್ಣೊಡೆಯರು ತಮ್ಮ 'ಶೂನ್ಯಸಂಪಾದನೆ'ಯಲ್ಲಿ ಹೆಸರಿಸಿದ್ದಾರೆ. ಹೀಗೆ ದೀರ್ಘಕಾಲ ಸಂಚರಿಸಿ ಆಶ್ವಾಸನೆ ಕೊಟ್ಟಂತೆ ಮತ್ತೆ ಕಲ್ಯಾಣಾಭಿಮುಖನಾಗುತ್ತಾನೆ. ಅವನ ಬರವನ್ನೇ ಹಾರೈಸಿದ್ದ ಬಸವಣ್ಣನವರು ಸಂಭ್ರಮದಿಂದ ಸ್ವಾಗತಿಸಿ ಆತನಿಗಾಗಿ ನಿರ್ಮಿಸಿದ್ದ 'ಶೂನ್ಯಸಿಂಹಾಸನದ' ಮೇಲೆ ಕುಳ್ಳಿರಿಸುತ್ತಾರೆ. ಆ ಸಂದರ್ಭದ ಆರೋಗಣೆಯ ಸಂದರ್ಭದಲ್ಲಿ ಬಸವಣ್ಣ ಚನ್ನಬಸವಣ್ಣನವರು ತಮ್ಮನ್ನೇ ಅರ್ಪಿಸಿಕೊಂಡು ಆತನನ್ನು ತೃಪ್ತಿಪಡಿಸುತ್ತಾರೆ. ಅನುಭವ ಮಂಟಪದ ಕೇಂದ್ರಸ್ಥಾನವನ್ನು ವಹಿಸಿಕೊಂಡು ಶರಣರಲ್ಲಿ ಹೊಸ ಉತ್ಸಾಹವನ್ನು ಆತ ತುಂಬುತ್ತಾನೆ. ಇದರಿಂದ ಬಸವಣ್ಣನವರ ಕಾರ್ಯಕ್ಷೇತ್ರ ವ್ಯಾಪಕವಾಗಿ ಬೆಳೆಯುತ್ತದೆ. ಎದುರಾದ ವಿರೋಧವನ್ನೆಲ್ಲಾ ಮೆಟ್ಟಿನಿಲ್ಲುತ್ತದೆ. ಆದರೆ ಚಳವಳಿಗೆ ಪರಿಪೂರ್ಣತೆ ನೀಡುವ ಸಲುವಾಗಿ ಅಸ್ಪೃಶ್ಯ ಹರಳಯ್ಯ ಬ್ರಾಹ್ಮಣ ಮಧುವರಸರ ನಡುವೆ ಬಾಂಧವ್ಯ ಬೆಳೆಸುವ ಮಟ್ಟಕ್ಕೆ ಶರಣರು ಮುಂದಾದಾಗ ಅಂದಿನ ಸಮಾಜ ಅದನ್ನು ಅರಗಿಸಿಕೊಳ್ಳಲಾರದೇ ಕಲ್ಯಾಣದಲ್ಲಿ ದೊಡ್ಡ ಕ್ರಾಂತಿಯಾಗಿ ಶರಣರೆಲ್ಲಾ ಚೆದುರುತ್ತಾರೆ. ಆದರೆ ಅದಕ್ಕೆ ಸ್ವಲ್ಪ ಪೂರ್ವದಲ್ಲಿಯೇ ಪ್ರಭುದೇವರು ಕಲ್ಯಾಣದಲ್ಲಿ ತಮ್ಮ ಕರ್ತವ್ಯ ಮುಗಿಯುತ್ತ ಬಂದುದನ್ನು ತಿಳಿದು ಶರಣರೆಲ್ಲರಿಗೂ ಅವರ ಕರ್ತವ್ಯಗಳ ಬಗ್ಗೆ ಎಚ್ಚರಿಸಿ ಶ್ರೀಶೈಲದತ್ತ ಹೋಗಿರುತ್ತಾರೆ. ಹೋಗಿ ಅಲ್ಲಿಯ ಕದಳಿಯ ವನದಲ್ಲಿ ಗುಹೇಶ್ವರನ ಹೃದಯಗಹ್ವರದಲ್ಲಿ ಒಡವೆರೆದ ಲಿಂಗಾಂಗಸಾಮರಸ್ಯದ ಕೊನೆಯ ನಿಲವನ್ನು ಪಡೆಯುತ್ತಾರೆ.

ಅಲ್ಲಮನ ವಚನಗಳ ಸಂಖ್ಯೆ ಎಷ್ಟು ಎಂಬುದು ಇನ್ನೂ ಖಚಿತವಾಗಿ ನಿರ್ಧಾರವಾಗಿಲ್ಲ. ಅಲ್ಲಮನೇ ಒಂದೆಡೆ ಎರಡೆಂಬತ್ತು ಕೋಟಿ ವಚನವ ಹಾಡಿ ಹಲವ ಹಂಬಲಿಸಿತ್ತೆನ್ನಮನವು ಎಂದಿದ್ದಾರೆ. ಇದರಿಂದ ಈತ ಹೆಚ್ಚಿನ ಸಂಖ್ಯೆಯ ವಚನಗಳನ್ನು ಬರೆದಿದ್ದನೆಂದು ಊಹಿಸುವುದು ತಪ್ಪಾಗಲರದು. ಅಧಿಕವಚನಗಳನ್ನೂ ಸೇರಿಸಿದರೆ ಒಟ್ಟು ೧೬೧೩ ವಚನಗಳು ಇದುವರೆಗೆ ಲಭ್ಯವಾಗಿವೆ. ಅವು ಇಂದು ಅಲ್ಲಮನ ಹೆಸರಿನಲ್ಲಿ

ಪ್ರಕಟವಾಗಿವೆ. ಅಲ್ಲಮನ ವಚನಗಳ ಅಂಕಿತದ ಬಗ್ಗೆ ಕೂಡಾ ಕೆಲಮಟ್ಟಿಗೆ ಚರ್ಚೆ ನಡೆದಿದೆ. ಗುಹೇಶ್ವರ, ಗೊಹೇಶ್ವರ, ಗುಹ್ಯೇಶ್ವರ, ಗೊಗೇಶ್ವರ, ಎಂಬ ವಿವಿಧ ಪಾಠಾಂತರಗಳಿವೆ. ಸದ್ಯಕ್ಕೆ 'ಗುಹೇಶ್ವರ' ಎಂಬುದೇ ಹೆಚ್ಚು ಪ್ರಚಲಿತವಿದ್ದು ಅದನ್ನೇ ಒಪ್ಪಿಕೊಳ್ಳಲಾಗಿದೆ. ಆಧ್ಯಾತ್ಮದ ಅನುಭವದಲ್ಲೆಂತೋ ಅಂತೆಯೇ ಅದನ್ನು ಅಭಿವ್ಯಕ್ತಗೊಳಿಸುವುದರಲ್ಲಿಯೂ ಅಲ್ಲಮ ಅದ್ವಿತೀಯ. ಇದು ಅವನ ಅಪಾರ ಅನುಭವ ಮತ್ತು ಅಭ್ಯಾಸದಿಂದ ಸಿದ್ಧಿಸಿದೆ. 'ಮಾತೆಂಬುದು ಜ್ಯೋತಿರ್ಲಿಂಗ' ಎಂಬ ಆತನ ಮಾತು ಆತನ ವಚನಗಳಲ್ಲಿ ಸಾರ್ಥಕಗೊಂಡಿದೆ. ಬಸವಣ್ಣನವರ ವಚನಗಳಲ್ಲಿ ಕಾಣುವ ಸಾಮಾನ್ಯ ಜೀವನದ ಸಂಕೀರ್ಣತೆಯನ್ನು ಅಲ್ಲಮನ ವಚನಗಳಲ್ಲಿ ಹೆಚ್ಚಾಗಿ ಕಾಣದಿದ್ದರೂ ಅನುಭಾವದ ಉತ್ತುಂಗ ಶಿಖರಗಾಮಿತ್ವದಲ್ಲಿ ಆತನನ್ನು ಮೀರಿಸುವವರು ಜಾಗತಿಕ ಅನುಭಾವ ಸಾಹಿತ್ಯದಲ್ಲಿ ಇನ್ನೊಬ್ಬರಿಲ್ಲ. ಶಿವ ಜೀವರ ಐಕ್ಯ ಕುರಿತು 'ಮರದೊಳಗಣ ಕಿಚ್ಚು ಮರವ ಸುಟ್ಟಂತಾದೆನಯ್ಯಾ', 'ಕರ್ಪುರದ ಗಿರಿಯ ಉರಿಹಿಡಿದ ಬಳಿಕ ಇದ್ದಿಲುಂಟೆ?', 'ಸ್ವಸ್ಥಾನ ಸುಸ್ಥಿರದ ಸುಮನ ಮಂಟಪದೊಳಗೆ ನಿತ್ಯನಿರಂಜನ ಪ್ರಭೆಯ ಬೆಳಗು', ಎಂಬ ವಚನಗಳನ್ನು ನೋಡಬಹುದು. ಅಲ್ಲದೆ ಆತನ ವಿಶ್ವಪೂಜೆಯ ವಿರಾಡ್ರೂಪವನ್ನು 'ಪ್ರಾಣಲಿಂಗಕ್ಕೆ ಕಾಯವೇ ಸಜ್ಜೆ' 'ಬಿಸಿಲೆಂಬ ಗುರುವಿಗೆ ನೆಳಲೆಂಬ ಶಿಷ್ಯ', 'ಗಗನವೇ ಗುಂಡಿಗೆ ಆಕಾಶವೇ ಅಗ್ಗವಣಿ' ಎಂಬ ವಚನಗಳಲ್ಲಿ ಕಾಣಬಹುದು. ಅನುಭವವನ್ನು ಸಂವಹನಗೊಳಿಸಲು ಆತನು ಬಳಸುವ ಅಲಂಕಾರಗಳು, ಉಪಮಾನಗಳು, ರೂಪಕಗಳು, ಸಾದೃಶ್ಯಗಳು, ಸೂತ್ರರೂಪದ ಮಾತುಗಳು ಆತನ ವಚನಗಳನ್ನು ಉತ್ಕೃಷ್ಟ ಕಲಾಕೃತಿಗಳನ್ನಾಗಿಸಿವೆ. ಅವು ಪರಿಣಾಮಕಾರಿಯಾಗಿ ಸಹೃದಯರನ್ನು ಮುಟ್ಟಿ ತಮ್ಮ ಉದ್ದೇಶವನ್ನು ಸಾಧಿಸುವ ಸಾಮರ್ಥ್ಯವನ್ನು ಪಡೆದಿವೆ.

'ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೆ?'. 'ಹಳ್ಳದೊಳಗೆ ಹುಳ್ಳಿ ಬರುತ್ತಿರಲು ನೆರೆತೆರೆಗಳು ತಾಗದಿಪ್ಪುವೆ?', 'ಕೊಟ್ಟ ಕುದುರೆಯನೇರಿಲರಿಯದೆ ಮತ್ತೊಂದು ಕುದುರೆಯ ಬಯಸುವರು ವೀರರೂ ಅಲ್ಲ ಧೀರರೂ ಅಲ್ಲ', 'ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ', 'ಆಸೆಗೆ ಸತ್ತುದು ಕೋಟಿ', 'ಸಾಸುವೆಯಷ್ಟು ಸುಖಕ್ಕೆ ಸಾಗದಷ್ಟು ದುಃಖನೋಡಾ', 'ಹಾಲನೇಮ ಹಿಡಿದವರು ಬೆಕ್ಕಾಗಿ ಹುಟ್ಟುವರು', 'ಹೊನ್ನುಹೆಣ್ಣು ಮಣ್ಣು ಮಾಯೆಯಲ್ಲ, ಮನದ ಮುಂದಣ ಆಶೆಯೇ ಮಾಯೆ ಕಾಣಾ', ಎಂಬಂತಹ ಸಾಲುಗಳಲ್ಲಿ ಅಲ್ಲಮನ ಕಾವ್ಯಶಕ್ತಿ, ಮಾತುಗಳ ಪ್ರಭೆ ಅನನ್ಯವಾಗಿದೆ.

ನೇರವಾದ ವಚನರಚನೆಯಿಂದ ಅದ್ಭುತ ಪ್ರಭಾವವನ್ನು ಸಾಧಿಸಿದ ಅಲ್ಲಮಪ್ರಭು, ಬೆಡಗಿನ ವಚನಗಳ ರಚನೆಗಳ ಮೂಲಕವೂ ವಿಶಿಷ್ಟವಾದ ಅನುಭಾವವನ್ನು ಅಭಿವ್ಯಕ್ತಿಸಿದ್ದಾರೆ. ಬೆಡಗಿನ ವಚನಗಳಲ್ಲಿ ಹೇಳಬೇಕಾದುದನ್ನು ನೇರವಾಗಿ ಹೇಳದೆ, ಒಂದು ಒಗಟಿನ ರೂಪದಲ್ಲಿ ಅಥವಾ ಒಂದು ಸಮಸ್ಯೆಯ ರೂಪದಲ್ಲಿ ಚಮತ್ಕಾರವಾಗಿ ಹೇಳುತ್ತಾನೆ. ಇದು ನಾರಿಕೇಳಪಾಕದಂತೆ. 'ಐದು ಸರ್ಪಂಗಳಿಗೆ ತನು ಒಂದು ದಂತವೆರಡು', 'ಊರ ಮಧ್ಯದ ಕಣ್ಣ ಕಾಡಿನೊಳಗೆ ಬಿದ್ದಿದಾವೆ ಐದು ಹೆಣಗಳು', 'ಭಿತ್ತಿ ಮೂರರ ಮೇಲೆ ಚಿತ್ರವ ಬರೆಯಿತ್ತು' ಎಂಬುವು ಬೆಡಗಿನ ವಚನಗಳಾಗಿವೆ. ಇಂತಹ ಬೆಡಗಿನ ವಚನಗಳನ್ನು ಪ್ರಭುದೇವ ಅತಿಹೆಚ್ಚಿನ ಸಂಖ್ಯೆಯಲ್ಲಿ ರಚಿಸಿದ್ದಾನೆ. ಒಟ್ಟಿನಲ್ಲಿ ಅಲ್ಲಮಪ್ರಭುವು ಸಾಧಕನಾಗಿ, ಸಿದ್ಧನಾಗಿ, ಅನುಭಾವಿಯಾಗಿ, ಬೆಳಕಿನ ದೀವಟಿಗನಾಗಿ, ಕವಿಯಾಗಿ, ಪ್ರವಾದಿಯಾಗಿ, ಸಮಾಜವನ್ನೆಲ್ಲಾ ವ್ಯಾಪಿಸಿನಿಂತ ಮಹಾಂತ ಜಂಗಮನಾಗಿ, ಹೀಗೆ ತನ್ನ ಬಹುಮುಖ ವ್ಯಕ್ತಿತ್ವದಿಂದ ಜ್ಯೋತಿರ್ಲಿಂಗವಾಗಿ ಪ್ರಕಾಶಿಸುತ್ತಿದ್ದಾನೆ.

**೩. ಬಸವಣ್ಣ : ಸು. ೧೧೬೦**

ಕರ್ನಾಟಕದ ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಹಾಗೂ ಆರ್ಥಿಕ ಚರಿತ್ರೆಯಲ್ಲಿ ಬಸವಣ್ಣನವರ ಸಾಧನೆ ಅದ್ವಿತೀಯವಾದುದು. ಅವರ ಬದುಕು-ಬರಹ ಸಾಧನೆ-ಸಿದ್ಧಿ ಅವರನ್ನು

ಯುಗಪ್ರವರ್ತಕ ಶಕ್ತಿಯಾಗಿ, ಯುಗದ ಕವಿಯಾಗಿ, ಸಮಾಜ ಸುಧಾರಕರಾಗಿ, ಜಗಜ್ಯೋತಿಯಾಗಿ, ವಿಶ್ವಮಾನವರನ್ನಾಗಿಸಿದೆ. ವೈಚಾರಿಕವಾದ ವೈಜ್ಞಾನಿಕವಾದ ತಮ್ಮ ನಡವಳಿಕೆಗಳಿಂದ ಅವರು ಇಂದಿಗೂ ನಮಗೆ ಪ್ರಸ್ತುತರಾಗಿದ್ದಾರೆ. ವಚನಸಾಹಿತ್ಯ ಪ್ರಕಾರವನ್ನು ಬಹುಶಕ್ತಿಯುತವಾಗಿ ವೈವಿಧ್ಯಪೂರ್ಣವಾಗಿ ಅವರು ಬಳಸಿದರು. ಅದರಿಂದ ಅದು ಕನ್ನಡಸಾಹಿತ್ಯ ಹಾಗೂ ಜನಜೀವನವನ್ನು ಹಸನುಗೊಳಿಸುವ ಪ್ರಬಲ ಮಾಧ್ಯಮವಾಯಿತು.

ಬಸವಣ್ಣನವರ ಕಾಲ ಮತ್ತು ಜೀವನದ ಕೆಲವು ವಿವರಗಳಲ್ಲಿ ಏಕಾಭಿಪ್ರಾಯವಿಲ್ಲ. ಆ ಬಗ್ಗೆ ವಿದ್ವಾಂಸರಲ್ಲಿ ವಿಪುಲವಾದ ಚರ್ಚೆಗಳು ನಡೆದಿವೆ. ಬಸವಣ್ಣನವರ ಉಲ್ಲೇಖ ಕಂಡುಬರುವ ಶಾಸನಗಳೆಲ್ಲಾ ಅವರ ಕಾಲಕ್ಕಿಂತ ಒಂದು ಶತಮಾನ ಈಚಿನವು. ಇನ್ನು ಗ್ರಂಥಗಳೂ ಅಷ್ಟೇ; ಅವರ ಸಮಕಾಲೀನಗಳಲ್ಲ. ಬಸವಣ್ಣನವರ ವಚನಗಳಲ್ಲಿ ಅವರು ಬಿಜ್ಜಳನ ಭಂಡಾರಿಯಾಗಿದ್ದುದು ಮುಂತಾದ ಒಂದೆರಡು ಅಂಶಗಳು ಮಾತ್ರಾ ಸ್ಪಷ್ಟವಾಗುತ್ತವೆ. ಬಸವಣ್ಣನವರು ಓಲೈಸಿದ ಬಿಜ್ಜಳ ಯಾರು? ಎಂಬ ಬಗ್ಗೆ ಸಾಕಷ್ಟು ವಿಚಾರಗಳು ಚರ್ಚಿತವಾಗಿವೆ. ಕೊನೆಗೆ ಕಲಚುರಿ ಬಿಜ್ಜಳನೆ ಬಸವಣ್ಣನವರ ಕಾಲದ ಬಿಜ್ಜಳನೆಂಬುದು ಖಚಿತವಾಗಿದೆ. ಬಸವಣ್ಣನವರ ಜೀವಿತರೇಖೆಗಳನ್ನು ಸ್ಥೂಲವಾಗಿ ಹೀಗೆ ಗುರುತಿಸಬಹುದು: ಬಿಜ್ಜಳನು ಕ್ರಿ.ಶ. ೧೧೪೫ಕ್ಕೂ ಮುಂಚೆ ಮಹಾಮಂಡಲೇಶ್ವರನೂ ೧೧೬೧ರ ನಂತರ ಕಲ್ಯಾಣದ ಚಕ್ರವರ್ತಿಯೂ ಆಗಿದ್ದನು.

ಒಟ್ಟಾರೆ ೧೨ನೆಯ ಶತಮಾನದ ಸಂದರ್ಭವನ್ನು ಪರಿಕಲ್ಪಿಸಿಕೊಳ್ಳುವುದಾದರೆ ಆ ಶತಮಾನವನ್ನು ಬಸವಣ್ಣನವರ ಉಜ್ವಲ ವ್ಯಕ್ತಿತ್ವ ವ್ಯಾಪಿಸಿಕೊಂಡಿತ್ತೆಂದು ಹೇಳಲು ಯಾವುದೇ ಆತಂಕವಿಲ್ಲ. ಹಾಗಾಗಿ ಬಸವಣ್ಣನವರ ಜನನದ ಕಾಲ ಇತ್ಯಾದಿ ಸಂಗತಿಗಳು ಗೌಣವೆನಿಸುತ್ತವೆ. ಒಟ್ಟಾರೆ ಹೇಳುವುದಾದರೆ ಬಸವಣ್ಣನವರ ಕ್ರಿಯಾಶೀಲ ಬದುಕು ೧೨ನೆಯ ಶತಮಾನದ ಪೂರ್ವಾರ್ಧದಲ್ಲಿ ಆರಂಭಗೊಂಡು ಕ್ರಿ.ಶ.೧೧೬೮ರವರೆಗೂ ವಿಸ್ತರಿಸಿಕೊಂಡಿತ್ತೆಂದು ಸ್ಥೂಲವಾಗಿ ಹೇಳಬಹುದು. ಬಸವಣ್ಣನವರ ಅಣ್ಣ ದೇವರಾಜ, ಅಕ್ಕ ನಾಗಮ್ಮ. ಅತ್ಯಂತ ಪ್ರತಿಭಾವಂತ ಶಿಶುವಾಗಿ ಬೆಳೆದ ಬಸವಣ್ಣ ೮ ವರ್ಷದಲ್ಲಿ ಉಪನಯನವನ್ನು ಅದರ ಮೌಢ್ಯಕ್ಕೆ ವಿರೋಧಿಸಿದನೆಂದೂ, ಮೊದಲು ಉಪನಯನ ನಡೆದು ಕೆಲವು ಕಾಲದ ನಂತರ ಅಸಮಾನತೆಯ ಸಂಕೇತವಾಗಿದ್ದ ಅದನ್ನು ಕಿತ್ತು ಹಾಕಿ, ಕೂಡಲ ಸಂಗಮಕ್ಕೆ ಹೊರಟನೆಂದೂ ಆತನ ಅಕ್ಕ ಅಕ್ಕನಾಗಮ್ಮನೂ ಅವನನ್ನು ಹಿಂಬಾಲಿಸಿದಳೆಂದು ಹೇಳುತ್ತಾರೆ. ಆ ವೇಳೆಗೆ ಅವರ ಅಕ್ಕ ಸಂಗಮದ ಶಿವಸ್ವಾಮಿಯನ್ನು ಮದುವೆಯಾಗಿದ್ದಳು. ಪ್ರಸಿದ್ಧ ವಿದ್ಯಾಕೇಂದ್ರವಾಗಿದ್ದ ಸಂಗಮದ ಅಧಿಪತಿಗಳಾದ ಜಾತವೇದಮುನಿಗಳು ಅಥವಾ ಈಶಾನ್ಯಗುರುಗಳು ಬಸವನ ಪ್ರತಿಭೆಯನ್ನು ಬಾಲ್ಯದಲ್ಲಿಯೇ ಗುರುತಿಸಿ ಅವನನ್ನು ಪೋಷಿಸತೊಡಗಿದರು. ಅಲ್ಲಿ ೧೦-೧೨ ವರ್ಷ ಅಕ್ಕನ ವಾತ್ಸಲ್ಯ ಹಾಗೂ ಗುರುಗಳ ರಕ್ಷಣೆಯಲ್ಲಿ ಅವರ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಮಾಡಿ ಪಾರಂಗತನಾದನು. ಮುಂದೆ ಆತ ಸಾಮಾಜಿಕರಂಗಕ್ಕೆ ಧುಮುಕಬೇಕೆಂದಿರುವಾಗ ಮತ್ತೊಂದು ತಿರುವು ಬರುತ್ತದೆ.

ಬಸವಣ್ಣನ ಸೋದರಮಾವ ಬಲದೇವ ಮಂಗಳವಾಡಿಯಲ್ಲಿ ಚಾಲುಕ್ಯರ ಸಾಮಂತನಾಗಿದ್ದ ಕಳಚೂರ್ಯ ಬಿಜ್ಜಳನ ಬಳಿ ದಂಡಾಧೀಶನಾಗಿದ್ದನು. ಆತನ ಒಬ್ಬಳೇ ಮಗಳು ಗಂಗಾಬಿಕೆ ಚಿಕ್ಕಂದಿನಲ್ಲೇ ತಾಯಿಯನ್ನು ಕಳೆದುಕೊಂಡಿದ್ದಳು. ಆಕೆಯ ಮದುವೆಯ ಬಗ್ಗೆ ಚಿಂತಿಸುವಾಗ ಬಲದೇವನು ಕೂಡಲ ಸಂಗಮದಿಂದ ಬಂದ ಪಂಡಿತರಿಂದ ಬಸವನ ಕೀರ್ತಿ ಕೇಳಿ ತನ್ನ ಸೋದರಳಿಯ ಬಸವನನ್ನೇ ಅಳಿಯನನ್ನಾಗಿ ಮಾಡಿಕೊಳ್ಳಲು ನಿರ್ಧರಿಸಿದನು. ಆದರೆ ಅದಕ್ಕೆ ಬಸವಣ್ಣ ಸುಲಭವಾಗಿ ಒಪ್ಪುವಂತಿರಲಿಲ್ಲ. ಸಾಮಾಜಿಕ ಸೇವೆಗೇ ತನ್ನನ್ನು ಮುಡಿಪಾಗಿರಿಸಲು ಬಯಸಿದ್ದ ಬಸವಣ್ಣ ಗುರುಗಳ ತಿಳುವಳಿಕೆಯ ಹಾಗೂ ಒತ್ತಾಯದ ಮೇರೆಗೆ ಆ ಮದುವೆಗೆ ಒಪ್ಪಿ ಅದಕ್ಕಾಗಿ ಮಂಗಳವಾಡಕ್ಕೆ ಹೋಗುವಾಗ ತನ್ನ ಜೊತೆಗೆ

ಅಕ್ಕನಾಗಮ್ಮ, ಭಾವ ಶಿವಸ್ವಾಮಿ ಹಾಗೂ ಅವರ ಮಗ ಚನ್ನಬಸವಣ್ಣನವರನ್ನೂ ಒತ್ತಾಯದಿಂದ ಕರೆದೊಯ್ಯುತ್ತಾನೆ. ಮಂಗಳವಾಡಕ್ಕೆ ಹೋದಮೇಲೆ ಗಂಗಾಂಬಿಕೆಯ ಜೊತೆಗೆ ಅವಳ ಗೆಳತಿ ನೀಲಲೋಚನೆಯನ್ನೂ ಮದುವೆಯಾಗಬೇಕಾಯಿತು. ನೀಲಲೋಚನೆ ಬಿಜ್ಜಳನ ಮತ್ತೊಬ್ಬ ದಂಡನಾಯಕ ಸಿದ್ಧರಸನ ಮಗಳು. ಆಕೆ ತಂದೆತಾಯಿಗಳನ್ನು ಕಳೆದುಕೊಂಡಾಗ ಬಿಜ್ಜಳನ ಬಳಿಯಲ್ಲೇ ತಂಗಿಯಾಗಿ ಬೆಳೆದಳು. ತಾಯಿಯಿಲ್ಲದ ಗಂಗಾಂಬಿಕೆಗೆ ಅತ್ಯಂತ ಆತ್ಮೀಯಳಾದಳು. ಅವರೀರ್ವರ ನಡುವೆ ಒಬ್ಬರನ್ನೊಬ್ಬರು ಅಗಲಲಾರದಷ್ಟು ಅನ್ಯೋನ್ಯತೆ ಬೆಳೆದ ಕಾರಣವಾಗಿ ಬಸವಣ್ಣ ಆಕೆಯನ್ನೂ ಮದುವೆಯಾಗಬೇಕಾಗಿ ಬಂದಿರಬಹುದು. ಅಂತೂ ಮದುವೆಯೇ ಬೇಡವೆನ್ನುತ್ತಿದ್ದ ಬಸವಣ್ಣ ಇಬ್ಬರನ್ನು ಮದುವೆಯಾದುದು ನಿಜ.

ಈ ವಿವಾಹ ಸಂಬಂಧ ಬಸವಣ್ಣನ ಜೀವನದ ದಿಕ್ಕನ್ನೇ ಬದಲಿಸಿತು. ಬಿಜ್ಜಳನ ಭಂಡಾರದಲ್ಲಿ ಮೊದಲಿಗೆ ಆತನಿಗೆ ಕರಣಿಕವೃತ್ತಿಯೂ ದೊರಕಿತು. ಮುಂದೆ ಸ್ವಲ್ಪಕಾಲದಲ್ಲಿಯೇ ಬಲದೇವ ದೈವಾಧೀನನಾಗಲು ಆತನ ಸ್ಥಾನಕ್ಕೆ ಬಸವಣ್ಣನನ್ನೇ ನೇಮಿಸಿದ ಬಿಜ್ಜಳ. ಆತನು ಕುಶಾಗ್ರಮಯಾದ ಬಸವಣ್ಣನನ್ನು ಬಹಳ ಬೇಗನೇ ಭಂಡಾರದ ಮಂತ್ರಿಯಾಗಿ ನೆಲೆಗೊಳಿಸಿದನು.

ವ್ಯವಹಾರಕ್ಷೇತ್ರದ ಜೊತೆಗೆ ಬಸವಣ್ಣನಿಗೆ ಆಸಕ್ತಿಯಿದ್ದ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರದ ಸಾಧನೆಯೂ ಮುಂದುವರಿಯುತ್ತಾ ಹೋಯಿತು. ಅದು ಸಮಾಜದ ಮೇಲೂ ಕ್ರಾಂತಿಕಾರಕ ಪರಿಣಾಮವನ್ನು ಬೀರುತ್ತಾ ಹೋಯಿತು. ಬಸವಣ್ಣ ಮಂಗಳವಾಡಕ್ಕೆ ಬಂದ ಒಂದೆರಡು ವರ್ಷಗಳಲ್ಲಿಯೇ ಬಿಜ್ಜಳ ಪ್ರಬಲನಾಗಿ ಚಾಲುಕ್ಯ ತೈಲಪ ಚಕ್ರವರ್ತಿಯನ್ನು ಸೋಲಿಸಿ ಕಲ್ಯಾಣದಲ್ಲಿ ತಾನೇ ಸ್ವಯಂಘೋಷಿತ ಚಕ್ರವರ್ತಿಯಾದನು. ತನ್ನ ವಿಶ್ವಾಸದ ಬಸವಣ್ಣನನ್ನು ತಾನಿದ್ದ ಕಲ್ಯಾಣಕ್ಕೇ ಕರೆಸಿಕೊಂಡು ಮಹಾಭಂಡಾರಿಯಾಗಿ ಆತನನ್ನು ನೇಮಿಸಿದನು. ಹೀಗೆ ಬಸವಣ್ಣನವರ ಅಧಿಕಾರ ಕ್ಷೇತ್ರ ವಿಸ್ತಾರವಾದಂತೆ ಅವರ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ, ಕ್ಷೇತ್ರಗಳೂ ವಿಸ್ತಾರವಾಗುತ್ತಾ ಹೋಯಿತು.

ಸುಮಾರು ೩೦ ವರ್ಷಗಳ ಕಾಲ ಮಂಗಳವಾಡೆ ಮತ್ತು ಕಲ್ಯಾಣಗಳು ಬಸವಣ್ಣನವರ ಕಾರ್ಯಕ್ಷೇತ್ರವಾಗಿದ್ದವು. ಈ ಅವಧಿಯಲ್ಲಿ ಅವರು ಸಾಧಿಸಿದ ಕಾರ್ಯಗಳ ಪರಿಣಾಮ ಅದ್ವಿತೀಯವಾದುದು. ಇಡೀ ಯುಗವನ್ನು ಎಚ್ಚರಿಸಿದ ಯುಗಪ್ರವರ್ತಕ ಶಕ್ತಿಯಾಗಿ ಪರಿಣಮಿಸಿದ್ದರು ಬಸವಣ್ಣನವರು. ಧರ್ಮ ಸಾರ್ವತ್ರಿಕಶಕ್ತಿಯಾಗಿ ಸಮಷ್ಟಿಮನಸ್ಸನ್ನು ಮುಟ್ಟಿತು. ಪರುಷಸ್ಪರ್ಶದಂತೆ ಅವರನ್ನು ಪರಿವರ್ತಿಸಿತು. ಆ ಯುಗದ ಮಹಾವ್ಯಕ್ತಿಗಳೆಲ್ಲರನ್ನೂ ಕಲ್ಯಾಣಕ್ಕೆ ಆಕರ್ಷಿಸಿದರು ಬಸವಣ್ಣನವರು. ಅವರು ನೂರಾರಲ್ಲ ಸಾವಿರಾರು ಸಂಖ್ಯೆಯಲ್ಲಿ ಅಸಂಖ್ಯ ಶರಣರು ಅಲ್ಲಿ ಸಮಾವೇಶಗೊಂಡರು. ಅವರೆಲ್ಲರೂ ಅನುಭಾವಗೋಷ್ಠಿಯಲ್ಲಿ ಮಥಿಸಿ ಧರ್ಮದ ನವನೀತವನ್ನು ತೆಗೆದರು. ಅಲ್ಲಮನಂತಹ ಮಹಾಮೇರು ಸದೃಶ ವ್ಯಕ್ತಿತ್ವವೂ ಬಸವಣ್ಣನವರ ಮುಂದೆ ಬಾಗಿ ಕಲ್ಯಾಣದಲ್ಲಿ ಕೆಲವು ಕಾಲ ಅನುಭವಮಂಟಪದ ಅಧ್ಯಕ್ಷರಾಗಿದ್ದರು.

ಬಸವಣ್ಣನವರ ಕ್ರಾಂತಿಕಾರಕ ಭಾವನೆಗಳು ವೈದಿಕ ಪರಂಪರೆಯನ್ನು ಕೆರಳಿಸಿದವು. ಅವರ ವಿರೋಧಿಶಕ್ತಿಗಳು ಸಂಘಟಿತವಾಗಿ ಬಸವಣ್ಣನವರನ್ನು ಪದಚ್ಯುತಗೊಳಿಸಲು ಹವಣಿಸಿದವು. ರಾಜ್ಯಭಂಡಾರದ ಹಣವನ್ನು ದುರ್ವಿನಿಯೋಗ ಮಾಡಿ ದಾಸೋಹ ನಡೆಸುತ್ತಿರುವರೆಂದು ರಾಜನ ಬಳಿಯಲ್ಲಿ ದೂರಿದರು; ಜಂಗಮವರ ಹೆಸರಿನಲ್ಲಿ ಪುಂಡರನ್ನೆಲ್ಲಾ ಸಂಘಟಿಸುತ್ತಿದ್ದಾರೆಂದು ವಿಷಕಾರಿದರು; ಆದರೆ ಅವೆಲ್ಲವೂ ಸೂರ್ಯನ ಮುಖಕ್ಕೆ ಮಣ್ಣೆರಚಿದಂತಾದವು. ಆದರೆ ಅಷ್ಟಕ್ಕೇ ಅವರ ಪ್ರಯತ್ನ ನಿಲ್ಲಲಿಲ್ಲ. ಬೇರೆಬೇರೆ ಹಂಚಿಕೆಗಳಿಂದ ಬಸವಣ್ಣನವರ ಕಾರ್ಯಗಳಿಗೆ ಮಸಿಬಳಿಯುವ ಪ್ರಯತ್ನವನ್ನು ಮಾಡುತ್ತಲೇ ಇದ್ದರು.

ಇವುಗಳ ಮಧ್ಯೆ ಬಿಜ್ಜಳನನ್ನು ಪದಚ್ಯುತಗೊಳಿಸುವ ರಾಜಕೀಯ ಪಿತೂರಿ ನಡೆಯುತ್ತಿತ್ತು. ಇದಕ್ಕೆ ಬಳ್ಳಿಗಾವೆಯ ಕಸಪಯ್ಯನಾಯಕ ಮತ್ತು ಬಿಜ್ಜಳನ ತಮ್ಮ ಮಲ್ಲುಗಿ ನೇತಾರರಾಗಿದ್ದಂತೆ ಕಾಣುತ್ತದೆ. ಮಲ್ಲುಗಿಗೆ ತಾನು ಚಕ್ರವರ್ತಿಯಾಗಬೇಕೆಂಬ ಆಸೆ. ಇದಲ್ಲದೆ ಬಿಜ್ಜಳನ ಮಕ್ಕಳಲ್ಲೇ ಅಧಿಕಾರಕ್ಕಾಗಿ ಸ್ಪರ್ಧೆ ನಡೆಯುತ್ತಿತ್ತು. ಈ ವೇಳೆಯಲ್ಲಿ ಬಸವಣ್ಣನವರ ಸಾಮಾಜಿಕ ಕಿಡಿಯನ್ನು ವಿರೋಧಿಗಳು ತಮ್ಮ ಸ್ವಾರ್ಥಸಾಧನೆಗಾಗಿ ಬಳಸಿಕೊಂಡರು. ಅಸ್ಪೃಶ್ಯ ಹರಳಯ್ಯನ ಮಗನಿಗೂ, ಬ್ರಾಹ್ಮಣ ಮಧುವರಸನ ಮಗಳಿಗೂ ವಿವಾಹ ಏರ್ಪಡಿಸಿದುದು ಇಂತಹ ಒಂದು ಕಿಡಿ ಸಿಡಿದಂತಾಯಿತು. ಅಂದಿನ ಸಮಾಜ ಅದನ್ನು ಅರಗಿಸಿಕೊಳ್ಳಲಾರದೇ ವರ್ಣಸಂಕರವಾಯಿತೆಂದು ಹುಯಿಲೆಬ್ಬಿಸಿತು. ಇದರೊಡನೆ ರಾಜಕೀಯ ಪಿತೂರಿಯೂ ಸೇರಿ ಹರಳಯ್ಯ ಮಧುವರಸರಿಗೆ ಬಿಜ್ಜಳ ಮರಣದಂಡನೆಯನ್ನು ವಿಧಿಸುವಂತಾಯಿತು. ಅದಾದ ಸ್ವಲ್ಪ ಕಾಲದಲ್ಲೇ ಬಿಜ್ಜಳನ ಕೊಲೆಯಾಯಿತು. ಈ ಅಪರಾಧವನ್ನು ಶರಣರ ಮೇಲೆ ಹಾಕುವ ಪ್ರಯತ್ನ ನಡೆಯಿತು. ಈ ಬೆಳವಣಿಗೆಗಳಿಂದ ಬೇಸರಗೊಂಡು ಮೊದಲೇ ಕಲ್ಯಾಣವನ್ನು ಬಿಟ್ಟಿದ್ದ ಬಸವಣ್ಣನವರು ಕೂಡಲಸಂಗಮಕ್ಕೆ ಹೋಗಿ ಐಕ್ಯರಾದರು. ಇವಿಷ್ಟೂ ಬಸವಣ್ಣನವರ ಸ್ಥೂಲ ಜೀವನಚರಿತ್ರೆ.

ಇನ್ನು ಅವರ ಸಾಹಿತ್ಯರಚನೆಗೆ ಬಂದರೆ ಬಸವಣ್ಣನವರೂ ಸೇರಿದಂತೆ ಆ ಕಾಲದ ಎಲ್ಲ ವಚನಕಾರರೂ ಸಾಹಿತ್ಯ ರಚಿಸುವ ಉದ್ದೇಶದಿಂದ ವಚನಗಳನ್ನು ಸೃಷ್ಟಿಸಲಿಲ್ಲ. ತಂತಮ್ಮ ಆತ್ಮೋದ್ಧಾರದ ಹಿನ್ನೆಲೆಯಲ್ಲಿ ಕಂಡುಕೊಂಡ ಸಾಮಾಜಿಕ ಧಾರ್ಮಿಕ ಆರ್ಥಿಕ ನೈತಿಕ ಚಿಂತನೆಗಳನ್ನು ಸಮಾನರೊಡನೆ ಅಭಿವ್ಯಕ್ತಿಸಿ ಹಂಚಿಕೊಳ್ಳುವ ಉದ್ದೇಶದಿಂದ ವಚನಗಳಾಗಿ ರಚನೆಯಾದವು. ಹೀಗೆ ಸಮಾಜೋದ್ಧಾರದ ಉಪಸರಕುಗಳಾಗಿ ಸೃಷ್ಟಿಯಾದ ವಚನಗಳು ಶ್ರೇಷ್ಠಸಾಹಿತ್ಯದ ರಚನೆಗಳೂ ಆದುದು ವಿಶೇಷವಾಗಿದೆ. ಬಸವಣ್ಣನವರು ಒಟ್ಟು ಎಷ್ಟು ವಚನಗಳನ್ನು ರಚಿಸಿದ್ದರೋ, ಇಂದು ನಮಗೆ ಅದು ತಿಳಿಯದಾಗಿದೆ. ಈವರೆಗೆ ಅವರ ೧೪೦೭ ವಚನಗಳು ನಮಗೆ ಸಿಕ್ಕಿವೆ. ‘ಕೂಡಲಸಂಗಮದೇವಾ’ ಎಂಬುದು ಅವರ ವಚನಗಳ ಅಂಕಿತವಾಗಿದೆ. ಅವರ ವಚನಗಳಲ್ಲಿ ಸಾಧಕನ ತಳಮಳ, ಭಕ್ತಿಯ ಮಿಡಿತ, ನಿರಹಂಕಾರ, ತ್ರಿವಿಧದಾಸೋಹದಿಂದ ಪಡೆದ ಷಟ್ಸ್ಥಲಸಾಧನೆ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ನೈತಿಕ, ಚಿಂತನೆಗಳು ಇವೆ. ಅಮೂರ್ತ ಅನುಭವಕ್ಕೆ ಮೂರ್ತ ಸ್ವರೂಪ ಕೊಟ್ಟಿರುವ ಅವರ ವಚನಗಳಲ್ಲಿ ಅನುಭಾವ ಮತ್ತು ಸಾಹಿತ್ಯದ ಅಸದೃಶ ಸಂಗಮವನ್ನು ಕಾಣುತ್ತೇವೆ.

‘ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ ಲಿಂಗವೆಂಬ ಎಲೆಯಾಯಿತ್ತು’ ಎಂಬ ವಚನ ದರ್ಶನದೀಪ್ತಿಯಿಂದ ಕೂಡಿದೆ. ಲೋಕಸಂಸಾರಿಯಾದ ಬಸವಣ್ಣನವರಿಗೆ ಕೇವಲ ತನ್ನೊಬ್ಬನ ಸಿದ್ಧಿಯಿಂದ ತೃಪ್ತಿಯಿರಲಿಲ್ಲ; ತನ್ನ ಸುತ್ತಮುತ್ತಲಿನ ಜನರ ದುಃಖ ನಿವಾರಣೆಯ ಮಾರ್ಗೋಪಾಯಗಳನ್ನು ಹೇಳುತ್ತಾ ಹೋದ ಸಮಾಜಸುಧಾರಕ ಬಸವಣ್ಣನವರು ಶ್ರೇಷ್ಠಕವಿಯಾಗಿ ಮಹಾಕವಿಯಾಗಿಯೂ ಜಗಜ್ಯೋತಿಯಾಗಿಯೂ ಗುರುತಿಸಲ್ಪಟ್ಟಿದ್ದಾರೆ. ಅವರು ಹಿಂದಿನ ಧರ್ಮಗ್ರಂಥಗಳಿಂದ ಪ್ರೇರಣೆ ಪಡೆದರೂ ಅವುಗಳನ್ನು ತಮ್ಮ ಅನುಭವದ ಕುಲುಮೆಯಲ್ಲಿ ಕಾಯಿಸಿ ಬಡಿದು ಅಪರಂಜಿಯನ್ನು ಮಾತ್ರಾ ಸ್ವೀಕರಿಸಿ ಪ್ರತಿಪಾದಿಸಿದರು. ಪೂರ್ಣಧರ್ಮದ ಶಾಶ್ವತಸತ್ಯಗಳನ್ನು ಸಾರಿದ ಅವರ ಮಾತುಗಳು ಕ್ರಾಂತಿಕಾರಿಯಾಗಿದ್ದವು. ಅವರ ವಿಚಾರಗಳು ಆಚಾರವಿಚಾರ ಸಮನ್ವಯವಾಗಿ, ಇಹಪರ ಸಮನ್ವಯವಾಗಿ, ಭಕ್ತಿಜ್ಞಾನಕರ್ಮ ಸಮನ್ವಯವಾಗಿ, ಭೇದಅಭೇದಗಳ ಸಮನ್ವಯವಾಗಿ, ವ್ಯಕ್ತಿ–ಸಮಾಜದ, ವ್ಯಷ್ಟಿ, ಸಮಷ್ಟಿಯ ಸಮನ್ವಯವಾಗಿ ಸಮಗ್ರದೃಷ್ಟಿಯ ಪರಿಪೂರ್ಣತೆಯ ಮಾರ್ಗವಾಗಿವೆ.

‘ದಯವಿಲ್ಲದ ಧರ್ಮ ಅದಾವುದಯ್ಯಾ’, ‘ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಬೋ’, ‘ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ’, ‘ಉಳ್ಳವರು ಶಿವಾಲಯವ ಮಾಡುವರು’,

‘ಹುತ್ತವ ಬಡಿದೊಡೆ ಹಾವು ಸಾಯಬಲ್ಲುದೆ ಅಯ್ಯಾ’, ‘ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ’ ‘ಕಳಬೇಡ ಕೊಲಬೇಡ’... ಇವೇ ಮೊದಲಾದ ಅವರ ವಚನಗಳಲ್ಲಿನ ಚಿಂತನೆಗಳು ಲೋಕೋತ್ತರವಾಗಿವೆ; ವಿಶ್ವಮಾನ್ಯವಾಗಿವೆ; ಸಾಹಿತ್ಯಕ ಸೌಂದರ್ಯದಿಂದಲೂ ಶ್ರೇಷ್ಠವೆನಿಸಿ ಬೆಳಗುತ್ತಿವೆ.

**೪. ಅಕ್ಕಮಹಾದೇವಿ : ಸು.೧೧೬೦**

ಅಕ್ಕಮಹಾದೇವಿಯು ಕನ್ನಡದ ಆದಿಕವಯಿತ್ರಿಯಷ್ಟೇ ಅಲ್ಲ, ಆಕೆ ಆದಿ ಮಹಾಕವಯಿತ್ರಿಯೂ ಆಗಿದ್ದಾಳೆ. ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ, ಧಾರ್ಮಿಕವಾಗಿ ಕನ್ನಡನಾಡಿನ ಇತಿಹಾಸದಲ್ಲಿ ಮಿನುಗುತಾರೆಯಾಗಿದ್ದಾಳೆ. ಆಕೆಯ ಜೀವನಚರಿತ್ರೆಯೇ ಹೆಣ್ಣಿನ ಗೌರವ, ಸ್ವಾತಂತ್ರ್ಯ ಹಾಗೂ ಪರಮಾರ್ಥ ಸಾಧನೆಯ ಮಹಾಪ್ರಕರಣವಾಗಿದೆ. ಆಕೆಯ ಜೀವನಚರಿತ್ರೆಯನ್ನು ಅನಂತರ ಬಂದ ಕವಿಗಳು, ಪುರಾಣಕಾರರು ಬರೆದಿರುವರಾದರೂ ಕೆಲವು ವಿಷಯಗಳಲ್ಲಿ ಇವರ ನಡುವೆ ಒಮ್ಮತವಿಲ್ಲದಿರುವುದರಿಂದ ಆಕೆಯ ಜೀವನದ ಕೆಲವು ವಿಷಯಗಳು ಚರ್ಚಾಸ್ಪದವಾಗಿಯೇ ಇವೆ.

ಅಕ್ಕಮಹಾದೇವಿಯು ಬಸವಣ್ಣನವರ ಸಮಕಾಲೀನೆಯಾಗಿದ್ದಳು ಎಂಬುದರಿಂದ ಈಕೆಯ ಕಾಲ ಸುಮಾರು ಕ್ರಿ.ಶ. ೧೧೬೦ ಎಂಬುದು ಸ್ಪಷ್ಟ. ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ ಸಮೀಪದ ಉಡುತಡಿ ಇಂದಿನ ಉಡುಗಣಿ ತಡಗಣಿ ಗ್ರಾಮಗಳೇ ಅಕ್ಕನ ಜನ್ಮಸ್ಥಳವೆಂಬುದು ಬಹುಮಟ್ಟಿಗೆ ಅಂಗೀಕೃತ ಅಭಿಪ್ರಾಯವಾಗಿದೆ. ಅಲ್ಲಿನ ಓಂಕಾರಶೆಟ್ಟಿ ಮತ್ತು ಲಿಂಗಮ್ಮ ಆಕೆಯ ತಂದೆತಾಯಿಗಳು. ಅವರ ಮನೆಯ ಗುರುಗಳಾದ ಗುರುಲಿಂಗದೇವರಿಂದ ಆಕೆಗೆ ಬಾಲ್ಯದಲ್ಲಿಯೇ ಲಿಂಗದೀಕ್ಷೆ ಆದಂತೆ ತೋರುತ್ತದೆ. ಆಕೆ ಬಾಲ್ಯ ದಾಟಿ ಯೌವನದಲ್ಲಿ ಕಾಲಿಟ್ಟು ಬೆಳೆಯುತ್ತಾ ಬಂದಂತೆ ಅಪೂರ್ವ ಸೌಂದರ್ಯದ ಖನಿಯಾಗಿ ಅರಳುತ್ತಾಳೆ. ಆಕೆಯನ್ನು ಅನುರೂಪನಾದ ವರನಿಗೆ ಕೊಟ್ಟು ಮದುವೆ ಮಾಡಲು ತಂದೆ ತಾಯಿಗಳು ಉದ್ಯುಕ್ತರಾದಾಗ, ಅವಳು ಚೆನ್ನಮಲ್ಲಿಕಾರ್ಜುನನೇ ತನ್ನ ಪತಿ, ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ? ಎಂಬ ಹಿನ್ನೆಲೆಯಲ್ಲಿ ತಾನು ಮದುವೆಯನ್ನೇ ಆಗುವುದಿಲ್ಲ ಎನ್ನುತ್ತಾಳೆ. ಅವಳ ಈ ದೃಢನಿರ್ಧಾರ ಕೇಳಿ ದಿಕ್ಕುತೋಚದೇ ಅವಳ ತಂದೆತಾಯಿಯರು ಅವಳನ್ನು ಮದುವೆಗೆ ಒಪ್ಪಿಸಲು ನಾನಾ ಪ್ರಯತ್ನಗಳನ್ನು ಮಾಡುತ್ತಾರೆ. ಆದರೆ ಗಿರಿಯಲ್ಲಲ್ಲದೆ ಹುಲು ಮೊರಡಿಯಲ್ಲಾಡುವುದೇ ನವಿಲು? ಅದೇ ರೀತಿ ಚನ್ನಮಲ್ಲಿಕಾರ್ಜುನನ ಒಲುಮೆಯವಳಾನು ಎಂಬ ಅವಳ ದೃಢನಿರ್ಧಾರ ಕೇಳಿ ಕಂಗಾಲಾಗುತ್ತಾರೆ. ಈ ಸಂದರ್ಭದಲ್ಲಿ ಕೌಶಿಕನ ಅನಿರೀಕ್ಷಿತ ಘಟನೆ ಸಂಭವಿಸಿ ಇಡೀ ಸನ್ನಿವೇಶಕ್ಕೆ ಒಂದು ತಿರುವನ್ನು ಕೊಡುತ್ತದೆ.

ಉಡುತಡಿಯ ರಾಜ ಕೌಶಿಕನು ಒಮ್ಮೆ ವೈಹಾಳಿ ಮುಗಿಸಿ ಉತ್ಸವದಲ್ಲಿ ಹಿಂದಿರುಗುವಾಗ ಮನೆಬಾಗಿಲಿನಲ್ಲಿ ನಿಂತಿದ್ದ ಮಹಾದೇವಿಯನ್ನು ನೋಡಿ ಮೋಹಿತನಾಗಿ ಆಕೆಯನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಶತಪ್ರಯತ್ನ ನಡೆಸುತ್ತಾನೆ. ಅವರೀರ್ವರ ನಡುವೆ ಇದ್ದಿರಬಹುದಾದ ಸಂಬಂಧದ ಬಗ್ಗೆ ವಿಪುಲವಾಗಿ ಚರ್ಚೆ ನಡೆದಿದೆ. ಆಕೆ ಮದುವೆಗೇ ತಯಾರಿರಲಿಲ್ಲ; ತಂದೆ ತಾಯಿಗಳು ಭವಿಗೆ ಕೊಡಲು ಸಿದ್ಧರಿರಲಿಲ್ಲ; ಆಗ ಬಹುಶಃ ಆಕೆಗೆ ಗುರುಗಳಿಂದ ಮಾರ್ಗದರ್ಶನ ದೊರೆತಿರಬೇಕು. ಗುರುಗಳು ಅವಳ ವೈರಾಗ್ಯ ತೀವ್ರತೆಯನ್ನು ಕಂಡು, ಈಗಿನ ಲೌಕಿಕ ಇಕ್ಕಟ್ಟುಗಳಿಂದ ಆಕೆಯನ್ನು ಪಾರುಮಾಡಲು ಹೊಸದೃಷ್ಟಿಯನ್ನು ಕರುಣಿಸಿರಬೇಕು. ಆ ಬಲದಿಂದ ಆಕೆ ತಂದೆತಾಯಿಗಳೊಡನೆ ಬಹುಪರಿಯಲ್ಲಿ ಚರ್ಚಿಸಿ ಮೊದಲೇ ಅವರಿಂದ ಸಮ್ಮತಿ ಪಡೆದು ತನ್ನ ಮದುವೆಯ ಸ್ವಾತಂತ್ರ್ಯವನ್ನು ತಾನೇ ವಹಿಸಿಕೊಂಡು ಮಹಾರಾಜನೊಡನೆ ಆ ಬಗ್ಗೆ ಮಾತನಾಡಲು ಅವ್ಯಾವಹಾರಿಕವಾದರೂ ತಾನೇ ಅರಮನೆಗೆ ಹೋಗುತ್ತಾಳೆ. ಅನಿರೀಕ್ಷಿತವಾದ ಆ ಸಂಭ್ರಮದಲ್ಲಿ ಕೌಶಿಕರಾಜನು ಆಕೆಯು ಹಾಕಿದ – ಪೂಜೆಗೆ, ಗುರುಲಿಂಗಜಂಗಮ ದಾಸೋಹಕ್ಕೆ, ಆಕೆಯ ಇಚ್ಛೆಗೆ ಅಡ್ಡಿಬಾರೆನೆಂಬ – ಷರತ್ತುಗಳಿಗೆಲ್ಲಾ ಒಪ್ಪಿದನು. ಆಗ ಆಕೆ ಅರಮನೆಯಲ್ಲಿಯೇ

ಉಳಿದಳು. ಆತುರ ಸ್ವಭಾವದ ಕೌಶಿಕರಾಜನು ಮೂರು ಷರತ್ತುಗಳನ್ನೂ ಬಹು ಬೇಗನೇ ಮುರಿದನು. ಆಗ ಆಕೆ ಸಿಡಿದೆದ್ದು ಕಾಮುಕ ಕೌಶಿಕನನ್ನು ತ್ಯಜಿಸಿ ಸೀರೆ ಮುಚ್ಚಿದ ಆ ದೇಹದ ಆಕರ್ಷಣೆಗೆ ಮರುಳಾದ ಆತನ ಮಬ್ಬಿಗೆ ಅಂಜನ ಹಚ್ಚಲು ತಾನು ಉಟ್ಟಿದ್ದ ಸೀರೆಯನ್ನೇ ಕಿತ್ತೆಸೆದು ಗುರುಗಳ ಬಳಿ ಬಂದಳು.

ಲೋಕವಿರೋಧಿ ಘಟನೆ ವಿಷದಂತೆ ತಂದೆ ತಾಯಿಗಳಿಗೆ ಹಾಗೂ ಊರಲ್ಲೆಲ್ಲಾ ಹಬ್ಬಿತು. ಬಹುಶಃ ಆ ವೇಳೆಗೆ ಗುರುಗಳ ಆದೇಶದಂತೆ ತುಂಡುಬಟ್ಟೆ ನಾರುಮಡಿಯನ್ನು ಉಟ್ಟಿದ್ದಳು. ಮಹಾದೇವಿ ತಮಗೆ ದಕ್ಕುವವಳಲ್ಲವೆಂಬುದನ್ನು ತಂದೆತಾಯಿಗಳು ಆ ವೇಳೆಗೆ ಕಂಡುಕೊಂಡಿದ್ದರು. ಆಕೆ ಆ ಊರನ್ನೇ ತ್ಯಜಿಸಿ ಕಲ್ಯಾಣದ ಕಡೆಗೆ ದೀರ್ಘಪ್ರಯಾಣ ಕೈಗೊಂಡಿದ್ದಳು. ಅವಳನ್ನು ಯಾರೂ ತಡೆಯಲಾಗಲಿಲ್ಲ.

ಉಡುತಡಿಯಿಂದ ಕಲ್ಯಾಣದವರೆಗಿನ ಅವಳ ಏಕಾಂಗ ಸಾಹಸದ ತಪೋಯಾತ್ರೆ ರೋಮಾಂಚನಕಾರಿಯಾದುದು. ೧೮ರ ಹರೆಯದ ಆ ಹೆಣ್ಣು ತನಗೆದುರಾದ ಎಲ್ಲಾ ಕಷ್ಟನಷ್ಟಗಳನ್ನು ದಿಟ್ಟತನದಿಂದ ಎದುರಿಸಿ 'ಕಿಡಿಕಿಡಿ ಕೆದರಿದರೆ ಎನಗೆ ಹಸಿವು ತೃಷೆ ಅಡಗಿತ್ತೆಂಬೆನು', 'ಹಸಿವಾದರೆ ಭಿಕ್ಷಾನ್ನಗಳುಂಟು', 'ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಪುರುಷರೆನಗೆ ಸೋದರರು, ಥೀ ಹೋಗಾ ಮರುಳೇ' ಎನ್ನುತ್ತಾ ಕಲ್ಯಾಣದ ಅನುಭವಮಂಟಪ ತಲುಪಿದಳು. ಅವಳನ್ನು ಸ್ವಾಗತಿಸಲು ಶರಣರು ಕಾತರರಾಗಿದ್ದರು. ಆದರೆ ಅವಳನ್ನು ಪರೀಕ್ಷಿಸದೇ ಸ್ವೀಕರಿಸುವಂತಿಲ್ಲವೆಂದು ಪ್ರಭುದೇವ ನಿರ್ಧರಿಸಿದ್ದನು. ಈ ಕಾರಣಕ್ಕಾಗಿ ಕಲ್ಯಾಣದ ಹೊರಬಾಗಿಲಿನಲ್ಲಿಯೇ ಆಕೆಯನ್ನು ಪರೀಕ್ಷಿಸಿ ಎದುರುಗೊಳ್ಳಲು ಕಿನ್ನರಿಬೊಮ್ಮಯ್ಯನನ್ನು ಕಳಿಸುತ್ತಾನೆ.

ಕಿನ್ನರಿಬೊಮ್ಮಯ್ಯನ ಪರೀಕ್ಷೆಯಲ್ಲಿ ಮಹಾದೇವಿ ತೇರ್ಗಡೆಯಾಗುತ್ತಾಳೆ. 'ಅಂಗದ ಭಂಗವ ಲಿಂಗಮುಖದಿಂದ ಗೆಲಿದೆ' ಎಂಬ ವಚನ ಅಕ್ಕನ ವೈರಾಗ್ಯವ್ಯಕ್ತಿತ್ವದ ಕನ್ನಡಿಯಂತಿದೆ. ಮುಂದೆ ತನ್ನ ದೀರ್ಘಕಾಲದ ಬಯಕೆ ಕೈಗೂಡುತ್ತಿರುವುದಕ್ಕೆ ರೋಮಾಂಚಿತಳಾಗಿ ಅನುಭವಮಂಟಪವನ್ನು ಪ್ರವೇಶಿಸುತ್ತಾಳೆ. ಈ ಸನ್ನಿವೇಶವನ್ನು ಶೂನ್ಯಸಂಪಾದನೆ ಚಿತ್ರವತ್ತಾಗಿ ನಿರೂಪಿಸಿರುವುದಲ್ಲದೆ ಅಕ್ಕನ ಮಹೋನ್ನತ ನಿಲುವನ್ನು ಎತ್ತಿಹಿಡಿದಿದೆ. ಬಗೆಬಗೆಯಾಗಿ ಆಕೆಯನ್ನು ಪ್ರಶ್ನಿಸುವ ಮೂಲಕ ಪರೀಕ್ಷಿಸಿದ ಮೇಲೆ ಅವಳ ಅಂತರಂಗದ ಅನುಭಾವದ ಅರಿವಿಗೆ ಪ್ರಭುದೇವರು ತಲೆಬಾಗಿ ಮೆಚ್ಚಿ ನುಡಿಯುತ್ತಾನೆ. ಆಗ ಉಳಿದ ಶರಣರೂ ಪರಿಪರಿಯಾಗಿ ಆಕೆಯನ್ನು ಹಾಡಿ ಹೊಗಳಿ ಸ್ವಾಗತಿಸುತ್ತಾರೆ. ಚೆನ್ನಬಸವಣ್ಣನವರಂತೂ 'ಅಜಕಲ್ಪಕೋಟಿ ವರುಷದವರೆಲ್ಲರೂ ಹಿರಿಯರೇ...' ಎಂಬಿತ್ಯಾದಿಯಾಗಿ ಸ್ತುತಿಸುತ್ತಾನೆ.

ಹೀಗೆ ಎಲ್ಲ ಶರಣರ ಮೆಚ್ಚುಗೆಗೆ ಪಾತ್ರಳಾಗಿ ಅಕ್ಕ ಕೆಲವು ಕಾಲ ಶರಣರ ಸಂಗದಲ್ಲಿದ್ದು ಸಾಧನೆ ಮುಂದುವರಿಸಿ ಬಹು ಬೇಗನೇ ಮೇಲೇರಿ ತನ್ನ ಗುರಿ ಕಾಣುತ್ತಾಳೆ. ಇದು ಇನ್ನು ಹೆಚ್ಚು ಕಾಲ ನಮ್ಮೊಡನಿರುವ ಚೈತನ್ಯವಲ್ಲವೆಂಬ ಅವಳ ಆಂತರ್ಯವನ್ನು ಕಂಡುಕೊಂಡ ಅಲ್ಲಮಪ್ರಭುಗಳು ಆಕೆಯ ಅಂತಿಮ ಗುರಿಯಾದ ಶ್ರೀ ಶೈಲದ ಕದಳಿವನದ ಕಡೆಗೆ ಅವಳನ್ನು ನಿರ್ದೇಶಿಸುತ್ತಾರೆ. ಆಗ ಅವರ ಆಣತಿಯಂತೆ ಅಕ್ಕ ಶ್ರೀಶೈಲದ ಕದಳಿವನದ ಕಡೆಗೆ ಹೊರಟು ನಿಲ್ಲುತ್ತಾಳೆ. ಆಗ ಆಕೆ ಹೇಳುವ 'ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ' ಎಂಬ ವಚನದ ಅಭೀಪ್ಸೆಯಂತೆ ಶರಣರ ತಲೆಗೆ ಹೂವನ್ನು ತರುವಂತೆ ಬಾಳುವೆ ಮಾಡಲು ಶ್ರೀಶೈಲ ಸೇರಿ ಅಲ್ಲಿನ ಕದಳಿವನವನ್ನು ಪ್ರವೇಶಿಸಿ ಭಗವಂತನಲ್ಲಿ ಬೇರಿಲ್ಲದಂತೆ ಒಂದಾಗುತ್ತಾಳೆ.

ಅಕ್ಕಮಹಾದೇವಿಯ ವಚನಗಳು ಸದ್ಯಕ್ಕೆ ನಮಗೆ ಸಿಕ್ಕಿರುವುದು ೪೩೩ ಮಾತ್ರವೇ. ಈ ವಚನಗಳಲ್ಲದೆ 'ಸೃಷ್ಟಿಯವಚನಗಳು', 'ಯೋಗಾಂಗ ತ್ರಿವಿಧಿ', 'ಪದಗಳು' 'ಮಂತ್ರಗೋಪ್ಯಗಳು' ಎಂಬ ಕೃತಿಗಳನ್ನೂ ಆಕೆ ರಚಿಸಿದ್ದಾಳೆ. ಹಾಗಾಗಿ ಅಕ್ಕ ಕೇವಲ ವಚನಕಾರ್ತಿಯಷ್ಟೇ ಅಲ್ಲ ಕಾವ್ಯಗಳನ್ನು ರಚಿಸಿದ ಕವಯಿತ್ರಿಯೂ

ಆಗಿದ್ದಾಳೆ. ಅವಳ ಜೀವನ ಸಾಧನೆಯ ಬಹುತೇಕ ಎಲ್ಲ ಹಂತದ ಭಾವಲಹರಿಗಳೂ ಅವಳ ವಚನಗಳಲ್ಲಿ ಜೀವಂತ ಅಭಿವ್ಯಕ್ತಿಯನ್ನು ಪಡೆದಿವೆ. ಆಕೆಯ ಬರವಣಿಗೆ ಭಾವಗೀತಾತ್ಮಕವಾಗಿದೆ. ಜೀವನದ ನೋವು ನಲಿವು, ಆಧ್ಯಾತ್ಮಿಕ ನಿಲವು ಅವಳ ಅಭಿವ್ಯಕ್ತಿಯ ವೈಶಿಷ್ಟ್ಯಗಳಾಗಿವೆ. ಶರಣಸತಿ ಲಿಂಗಪತಿ ಭಾವದ ವಚನಗಳಲ್ಲಿ ಒಂದು ಬಗೆಯ ಔನ್ನತ್ಯವಿದೆ; ಬದುಕಿನ ಸಂಕಷ್ಟಗಳ ನಿರೂಪಣೆಯಲ್ಲಿ ಮತ್ತೊಂದು ಬಗೆಯ ಔನ್ನತ್ಯವಿದೆ. 'ಅಂಗಸಂಗದಲ್ಲಿ ಲಿಂಗಸಂಗಿಯಾದೆನು', 'ಅಯ್ಯಾ ನೀನು ಕೇಳಿದಡೆ ಕೇಳು, ಕೇಳದಿದ್ದಡೆ ಮಾಣು', 'ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವಾ', 'ಕಳವಳದ ಮನ ತಲೆಕೆಳಗಾದುದವ್ವಾ', 'ತನುಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು' 'ಮುಡಿಬಿಟ್ಟು ಮೊಗಬಾಡಿ ತನುಕರಗಿದವಳ ಎನ್ನನೇಕೆ ನುಡಿಸುವಿರಿ? ಮೊದಲಾದ ವಚನಗಳಲ್ಲಿ ಲಿಂಗವಿಕಳಾವಸ್ಥೆಯ ವಿವಿಧ ಪರಿಗಳನ್ನು ಕಾಣಬಹುದು. 'ಅಕ್ಕ ಕೇಳವ್ವಾ ನಾನೊಂದ ಕನಸ ಕಂಡೆ', 'ಚಿಲಿಮಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೆ ನೀವು ಕಾಣಿರೆ', 'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ ನಾನೊಲಿದೆ', 'ಇಹಕ್ಕೊಬ್ಬ ಗಂಡನೆ? ಪರಕ್ಕೊಬ್ಬ ಗಂಡನೆ?' 'ಎನ್ನ ಮನವ ಮಾರುಗೊಂಡನವ್ವಾ', 'ಹರನೆ ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ' ಇವೇ ಮೊದಲಾದ ವಚನಗಳಲ್ಲಿ ಸತಿಪತಿಭಾವವನ್ನು ಕಾಣಬಹುದು. 'ಆರೂ ಇಲ್ಲದವಳೆಂದು ಅಳಿಗೊಳಲು ಬೇಡ ಕಂಡೆಯಾ?', 'ಕೈಸಿರಿಯ ದಂಡವ ಕೊಳಬಹುದಲ್ಲದೆ, ಮೈಸಿರಿಯ ದಂಡವ ಕೊಳಲುಂಟೆ? 'ಚಂದನವ ಕಡಿದು ಕೊರೆದು ತೇದಡೆ ನೊಂದೆನೆಂದು ಕಂಪ ಬಿಟ್ಟಿತ್ತೆ?', 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆ ಎಂತಯ್ಯಾ' ಮೊದಲಾದ ವಚನಗಳಲ್ಲಿ ಬದುಕಿನ ಸಂಕಷ್ಟಗಳನ್ನು ಎದುರಿಸುವ ದಿಟ್ಟತನವನ್ನು ಕಾಣುತ್ತೇವೆ. ಹೀಗೆ ಭಾವತೀವ್ರತೆಯಿಂದ ಕೂಡಿರುವ ಅಕ್ಕನ ವಚನಗಳಿಗೆ ವಿಶೇಷ ಸ್ಥಾನವಿದೆ.

**೫. ಆಯ್ದಕ್ಕಿ ಲಕ್ಕಮ್ಮ**

ಶರಣೆ ಆಯ್ದಕ್ಕಿ ಲಕ್ಕಮ್ಮ ರಾಯಚೂರು ಜಿಲ್ಲೆಯ ಅಮರೇಶ್ವರದ ಶರಣ ಮಾರಯ್ಯನ ಪತ್ನಿ. ಶರಣ ಮಾರಯ್ಯನು ಬಸವಣ್ಣ ಮತ್ತು ಅಲ್ಲಮರ ಸಮಕಾಲೀನನಾದುದರಿಂದ ಈಕೆಯ ಕಾಲ ಸು.೧೧೬೦ ಎಂಬುದು ಸ್ಪಷ್ಟವಾಗುತ್ತದೆ. ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯರ ಜೀವನದಲ್ಲಿ ನಡೆದಿದೆ ಎನ್ನಲಾದ ಶೂನ್ಯಸಂಪಾದನೆಯಲ್ಲಿ ಬರುವ ಬಹು ಪ್ರಖ್ಯಾತ ಘಟನೆಯ ಮೂಲಕ ಆಯ್ದಕ್ಕಿಲಕ್ಕಮ್ಮ ವಚನಕಾರರ ನಡುವೆ ಎದ್ದುಕಾಣುತ್ತಾಳೆ. ಅಲ್ಲಮನು ಬಸವಣ್ಣನವರ ಜೊತೆ ಮಾರಯ್ಯನ ಕಾಯಕತತ್ವವನ್ನು ಚರ್ಚಿಸುತ್ತಿರುವಾಗ, ಲಕ್ಕಮ್ಮ ಅಲ್ಲಿಗೆ ಬಂದು ತನ್ನ ಕಾಯಕವನ್ನೇ ಮರೆತು ಕುಳಿತ ಗಂಡನನ್ನು ಎಚ್ಚರಿಸುತ್ತಾಳೆ. ಇದರಿಂದ ಅಲ್ಲಮ ಬಸವಣ್ಣನವರೂ ಪ್ರಭಾವಿತರಾಗುತ್ತಾರೆ.

ರಾಯಚೂರು ಜಿಲ್ಲೆಯ ಅಮರೇಶ್ವರದ ಬಳಿಯಿದ್ದ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು, ಕಲ್ಯಾಣದ ಬಸವಣ್ಣನ ಕೀರ್ತಿಗೆ ಆಕರ್ಷಿತರಾಗಿ ಕಲ್ಯಾಣಕ್ಕೆ ತಾವೂ ಬಂದು, ಅಲ್ಲಿಯೇ ನೆಲೆಸುತ್ತಾರೆ. ಪತಿಯಂತೆಯೇ ಲಕ್ಕಮ್ಮನೂ ಶ್ರೇಷ್ಠ ಶಿವಾನುಭಾವಿ ಹಾಗೂ ವಚನಕಾರ್ತಿ ಕೂಡಾ. ಎಂತಹ ಪರಿಸ್ಥಿತಿಯಲ್ಲಿಯೂ ಕಾಯಕ ಮಾಡಿ ನೀಡಿ ಬದುಕಬೇಕೇ ವಿನಾ ಕೈಚಾಚಿ ಯಾರನ್ನೂ ಬೇಡಬಾರದು, ಅಗತ್ಯಕ್ಕಿಂತ ಹೆಚ್ಚು ಶೇಖರಿಸಬಾರದೆಂಬ ಸ್ವಾಭಿಮಾನಿ ಆಕೆ. ಮಹಾಮನೆಯ ಮುಂದೆ ಅಲ್ಲಲ್ಲಿ ಚೆಲ್ಲಿದ್ದ ಅಕ್ಕಿಯನ್ನು ಆಯ್ದು ತರುವುದೇ ಮಾರಯ್ಯನ ಕಾಯಕವಾಗಿತ್ತು. ಒಮ್ಮೆ ಅನುಭವಮಂಟಪದಲ್ಲಿ ಶರಣರೆಲ್ಲಾ ಅನುಭಾವಗೋಷ್ಠಿಯಲ್ಲಿರಲು ಆಯ್ದಕ್ಕಿಮಾರಯ್ಯ ಅಲ್ಲಿಗೆ ಬಂದು ಕಾಯಕವನ್ನು ಕುರಿತ ತನ್ನ ಅಭಿಪ್ರಾಯವನ್ನು –ಕಾಯಕದಲ್ಲಿ ನಿರತನಾಗಿದ್ದಾಗ ಗುರುಲಿಂಗಜಂಗಮಗಳ ಹಂಗನ್ನು ಹರಿಯಬೇಕು; ಹಾಗದ ಕಾಯಕಕ್ಕೆ ಹಡವಡ್ಡವ ತಾ ಎನ್ನಬಾರದು; ಕಾಯಕ ಮಾಡದೆ ಬೇಡಬಾರದು ಎಂಬಿತ್ಯಾದಿಯಾಗಿ–ಹೇಳುತ್ತಾನೆ. ಆಗ ಅಲ್ಲಮ ಅವನ ಮಾತುಗಳಿಗೆ ಉತ್ತರಿಸುತ್ತಾ ಮಾಡುವ ಕರ್ತವ್ಯದಿಂದಲೇ ಅದಕ್ಕೆ ಮೀರಿದುದನ್ನು

ಅರಿಯಬೇಕು ಎನ್ನುತ್ತಾನೆ. ಅಲ್ಲಮನ ಆ ಮಾತಿಗೆ ತಲೆದೂಗುತ್ತಾ ಅಂದಿನ ಕಾಯಕವನ್ನು ಮರೆತು ಘನಲಿಂಗ ಸಮಾಧಿಯಲ್ಲಿ ಸಮರಸನಾಗಿರಲು ಅಲ್ಲಿಗೆ ಆತನ ಪತ್ನಿ ಲಕ್ಕಮ್ಮನು ಪ್ರವೇಶಿಸಿ ಶರಣರಿಗೆಲ್ಲಾ ನಮಿಸಿ ಕಾಯಕಕ್ಕೆ ವೇಳೆಯಾದರೂ ಇನ್ನೂ ಅಲ್ಲಿಯೇ ಇರುವ ಪತಿಗೆ' ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೇ ಎಂದು ಎಚ್ಚರಿಸಿ ಆತನನ್ನು ಕಾಯಕಕ್ಕೆ ಕಳುಹಿಸಿಕೊಡುತ್ತಾಳೆ. ಸ್ವಲ್ಪ ಆತುರಾತುರವಾಗಿ ಕಾಯಕಕ್ಕೆ ಹೋದ ಮಾರಯ್ಯನು ಸ್ವಲ್ಪ ಹೊತ್ತಿನಲ್ಲಿಯೇ ಎಂದಿಗಿಂತ ಹೆಚ್ಚಿನ ಅಕ್ಕಿಯನ್ನು ಆಯ್ದುಕೊಂಡು ಹಿಂದಿರುಗುತ್ತಾನೆ. ಅದನ್ನು ಗಮನಿಸಿ ಲಕ್ಕಮ್ಮ 'ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೇ ಅಯ್ಯಾ' ಎಂದು ಆತನನ್ನು ಪ್ರಶ್ನಿಸಿ ಕಾಯಕ ಎಂಬುದು ದುರಾಸೆಯಿಂದ ಮಾಡುವ ದುಡಿಮೆಯಲ್ಲ. ದೇಹಕ್ಕೆ ಅಗತ್ಯವಾದಷ್ಟನ್ನು ಸತ್ಯಶುದ್ಧ ಮಾರ್ಗದಲ್ಲಿ ದುಡಿದು ಹಂಚಿ ಉಣ್ಣುವ ಆಧ್ಯಾತ್ಮಸಾಧನೆ. ಅಂತಹ ಭಕ್ತನ ಮನಕ್ಕೆ ಬಡತನವಿಲ್ಲ. ಕಾಯಕದ ಹೆಸರಿನಿಂದ ಅನಗತ್ಯ ಸಂಪತ್ತನ್ನು ಸಂಗ್ರಹಿಸಬಾರದು. ಅಗತ್ಯವಾದಷ್ಟನ್ನು ತಂದು ಒಂದೇ ಮನಸ್ಸಿನಿಂದ ದಾಸೋಹದಲ್ಲಿ ವಿನಿಯೋಗಿಸಬೇಕು. ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು. ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ. ಆದುದರಿಂದ ಇಷ್ಟೊಂದು ಅಕ್ಕಿಯನ್ನು ತಂದಿರುವುದು ಕಾಯಕಕ್ಕೆ ಸಲ್ಲದು. ಅಲ್ಲಿಯೇ ಸುರಿದು ಬನ್ನಿ" ಎನ್ನುತ್ತಾಳೆ. ಬಸವಣ್ಣನ ಉದಾತ್ತ ಆದರ್ಶವನ್ನು ತನ್ನ ಕಾಯಕದ ಬದುಕಿನಲ್ಲಿ ಲಕ್ಕಮ್ಮ ಆಚರಿಸಿ ತೋರಿಸಿದ್ದಾಳೆ. ಆಸೆಯಿಂದ ಸಂಗ್ರಹಿಸಿಟ್ಟುಕೊಂಡು ಆಡಂಬರದಿಂದ ಬದುಕುವುದು ಕಾಯಕವಲ್ಲ. ಅಂದಂದಿನ ಕಾಯಕವನ್ನು ಅಂದಂದಿಗೆ ಮಾಡಿ ಶುದ್ಧರಾಗಬೇಕು. ದುಡಿಯದೆ ತಿನ್ನುವ ಅಧಿಕಾರ ನಮಗಿಲ್ಲ. ಆದರೆ ಆ ದುಡಿಮೆ ಸಂಪತ್ತಿನ ಸಂಗ್ರಹದ ಆಸೆಯಿಂದ ಕೂಡಿರಬಾರದು ಎನ್ನುತ್ತಾಳೆ. ಈ ಕಾಯಕತತ್ವವು ಸ್ವಯಂಪೂರ್ಣ ಸಮಾಜವನ್ನು ಕಟ್ಟಲು ಬಸವೇಶ್ವರ ಕೂಡಿರಬಾರದು ಎನ್ನುತ್ತಾಳೆ. ಈ ಕಾಯಕತತ್ವವು ಸ್ವಯಂಪೂರ್ಣ ಸಮಾಜವನ್ನು ಕಟ್ಟಲು ಬಸವೇಶ್ವರರು ಹಾಕಿದ ಭದ್ರವಾದ ಅಡಿಪಾಯವಾಗಿದೆ.

ಇಂತಹ ಕಾಯಕನಿಷ್ಠೆಯಂತೆಯೇ ಆಧ್ಯಾತ್ಮ ಮಾರ್ಗದಲ್ಲಿಯೂ ಪತಿಗೆ ಎಚ್ಚರಿಕೆಯನ್ನು ನೀಡಬಲ್ಲಂತಹ ಸಾಧಕಿ ಲಕ್ಕಮ್ಮ. ಅಮರೇಶ್ವರ ಲಿಂಗದಲ್ಲಿ ತನಗೆ ಅರಿವು ಉಂಟಾಗುವ ಪರಿ ಎಲ್ಲಿ ಎಂಬ ಪತಿಯ ಪ್ರಶ್ನೆಗೆ ಲಕ್ಕಮ್ಮ ಕೊಡುವ ಉತ್ತರ ಅವಳ ಆಧ್ಯಾತ್ಮಿಕ ಸಾಧನೆಯ ಮಟ್ಟದ ಔನ್ನತ್ಯವನ್ನು ಸೂಚಿಸುತ್ತಿದೆ. ನಾವು ಇಲ್ಲಿ ಮಾಡುವ ಕೆಲಸವೇ ಬೇಕಾದಷ್ಟಿರುವಾಗ ಕೈಲಾಸವೆಂಬ ಬೇರೆ ಆಸೆಯೇಕೆ? ನಮ್ಮ ಕರ್ತವ್ಯವನ್ನು ನಾವು ಮಾಡಿದರೆ ಉಳಿದ ಫಲ ತಾನಾಗಿಯೇ ಬರುತ್ತದೆ. ಹಿಂದು ಮುಂದನ್ನು ಭಾವಿಸದೆ ಸಲೆ ಸಂದಿರುವ ಶರಣನಿದ್ದ ತಾವೇ ಕೈಲಾಸ. 'ಪ್ರತಿಷ್ಠಿಸುವ ಮೂರ್ತಿಗೆ ಉಳಿಯ ಏಟು ಮತ್ತು ಅದರಿಂದ ಒಂದು ರೂಪ ಉಂಟಲ್ಲದೆ ಸ್ವಯಂಭುವಿಗೆ ಅದಾವುದೂ ಇಲ್ಲ. ಆ ಸ್ವಯಂಭುವಿನ ಸಾಮರಸ್ಯವನ್ನರಿಯಲು ನಮಗೆ ಬೇರೆ ತಾವಿಲ್ಲ. ನಾವಿದ್ದ ನಿಲವೇ ಅದು. ಹಾಗೆ ಅದು ನಮಗೆ ಸಹಜಸ್ಥಿತಿಯಾಗಿ ಪರಿಣಮಿಸಬೇಕು'. ಎಂದು ತಿಳುವಳಿಕೆ ಹೇಳುತ್ತಾಳೆ. ಅಲ್ಲದೆ ನಮ್ಮಿಬ್ಬರಲ್ಲಿ 'ಕೂಟಕ್ಕೆ ಸತಿ ಪತಿ ಎಂಬ ನಾಮವಲ್ಲದೆ, ಅರಿವಿಂಗೆ ಬೇರೊಂದೊಡಲುಂಟೇ?' ಎನ್ನುತ್ತಾಳೆ. ದ್ರವ್ಯದ ಬಡತನವಿಲ್ಲದೆ ಚಿತ್ತಶುದ್ಧದಲ್ಲಿ ಕಾಯಕವ ಮಾಡುವ ಸದ್ಭಕ್ತಂಗೆ ಎತ್ತನೋಡಿದರತ್ತ ಲಕ್ಷ್ಮಿ ತಾನಾಗಿರುವಳು' ಎಂದು ಹೇಳಿ ಲಕ್ಕಮ್ಮ ಅನುಭವಮಂಟದ ಶರಣರನ್ನೆಲ್ಲಾ ತನ್ನ ಮನೆಗೆ ದಾಸೋಹಕ್ಕೆ ಆಹ್ವಾನಿಸುತ್ತಾಳೆ. ಬಸವಣ್ಣ ಆ ಘನಮಹಿಮ ದಂಪತಿಗಳಲ್ಲಿ ಮನದುಂಬಿ ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು ಎಂದು ಹೊಗಳುತ್ತಾನೆ'. ನಾನು ನೀಡುತ್ತೇನೆಂಬ ಅಹಂಕಾರದ ಆಡಂಬರ ತನ್ನದಲ್ಲವೆಂದು ಮಾರಯ್ಯ ವಿನಯದಿಂದ ನಿರೂಪಿಸುತ್ತಾನೆ.

ಹೀಗೆ ಲಕ್ಕಮ್ಮನ ಸಮಯೋಚಿತವಾದ ಎಚ್ಚರಿಕೆಯ ಮಾತುಗಳಿಂದ ತನ್ನ ಸಾಧನೆಯಲ್ಲಿ ಎಚ್ಚರಗೊಂಡ ಮಾರಯ್ಯ, ಕೊನೆಯಲ್ಲಿ ತನ್ನ ಸಾಮರಸ್ಯದ ನಿಲವನ್ನು 'ಭಾವವಿಲ್ಲದೆ ಅಡಗಿದೆ ಅಮರೇಶ್ವರ ಲಿಂಗದಲ್ಲಿ' ಎಂದು ಸೂಚಿಸುತ್ತಾನೆ. ಲಕ್ಕಮ್ಮನೂ ಅದಕ್ಕೆ ದನಿಗೂಡಿಸುತ್ತಾ 'ಮಾಡುವ ಮಾಟದ ಸಮಯದಿಂದವೆ ಮಾರಯ್ಯ ಪ್ರಿಯ

ಅಮಲೇಶ್ವರಲಿಂಗದಲ್ಲಿಯೆ ಐಕ್ಯ' ಎನ್ನುತ್ತಾಳೆ. ಹೀಗೆ ಈ ಶರಣದಂಪತಿಗಳ ಐಕ್ಯದ ನಿಲವು ಆದರ್ಶದ ಚಿರಂತನವಾಗಿದೆ.

ಲಕ್ಕಮ್ಮನ ಒಟ್ಟು ೨೫ ವಚನಗಳು ಈವರೆಗೆ ಸಿಕ್ಕಿವೆ. ಈಕೆಯ ವಚನಗಳ ಅಂಕಿತ 'ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗ'. ಈಕೆಯ ವಚನಗಳಲ್ಲಿ ಕಾಯಕದ ಮಹತ್ವ ಇದೆ. ಲಕ್ಕಮ್ಮನ ವಚನಗಳೆಲ್ಲವೂ ಸನ್ನಿವೇಶ ಪ್ರಾಮುಖ್ಯದಿಂದ ಕೂಡಿದವು. ಒಂದೊಂದು ವಚನವೂ ಮುಕ್ತವಚನವಾದರೂ, ಅವು ಸರಪಳಿಯ ಕೊಂಡಿಯಂತೆ ಬೆಸುಗೆಯಾಗಿ ಅದರಿಂದ ನಡೆದಿರಬಹುದಾದ ಘಟನೆ ಕಣ್ಮುಂದೆ ಬರುತ್ತದೆ. 'ಭಕ್ತರುಕಾಯಕವೆಂದು ದಾಯಗಾರಿಕೆಯಲ್ಲಿ ತಂದು ದಾಸೋಹವ ಮಾಡಬಹುದೆ?', 'ಮಾಡುವ ಮಾಟವುಳ್ಳನ್ನಕ್ಕ ಬೇರೊಂದು ಪದವನರಸಲೇತಕ್ಕೆ?', 'ಪ್ರತಿಷ್ಠೆಗೆ ಮಾಟವಲ್ಲದೆ ಸ್ವಯಂಭುವಿಗುಂಟೆ ಉಳಿ?', ಇತ್ಯಾದಿ ವಚನಗಳಲ್ಲಿ ಕಾಯಕತತ್ವ ಬಿಂಬಿತವಾಗಿದೆ.

**ಈ) ವಚನಸಾಹಿತ್ಯ : ಆಯ್ದ ಪರಿಕಲ್ಪನೆಗಳು**

**೧) ಭಕ್ತಿ :**

ಈ ಲೋಕದ ಕಷ್ಟಕಾರ್ಪಣ್ಯಗಳಿಂದ ವ್ಯಕ್ತಿಯೊಬ್ಬ ಬಳಲುತ್ತಿರುವಾಗ ನಮಗೆ ನೆರವಾಗುವ ವ್ಯಕ್ತಿಯೊಬ್ಬ ದೊರೆತರೆ ಹೇಗೆ ಮನಸ್ಸಿಗೆ ಸಮಾಧಾನವಾಗುತ್ತದೋ ಹಾಗೆ ನಮಗೆ ನೆರವಾಗುವ ಕರುಣಾಮಯಿಯಾದ ಪ್ರೇಮಮಯಿಯಾದ ಭಗವಂತನೊಬ್ಬನಿದ್ದಾನೆಂಬ ನಂಬಿಕೆಯೇ ನಮ್ಮ ಮನಸ್ಸಿಗೆ ಸಮಾಧಾನವನ್ನೂ, ಆನಂದವನ್ನೂ ಉಂಟುಮಾಡುತ್ತದೆ. ನಮ್ಮ ಮೊರೆಯನ್ನು ಕೇಳಿ ನಮ್ಮನ್ನು ಈ ಜಗತ್ತಿನ ಕಷ್ಟಸಂಕಟಗಳಿಂದ ಪಾರುಮಾಡಿಸುವ ಆ ಪರಮಾತ್ಮನನ್ನು ಒಲಿಸಬೇಕು; ಅದಕ್ಕೆ ಸರ್ವರೀತಿಯಿಂದಲೂ ಪ್ರಯತ್ನ ಮಾಡಬೇಕು; ಅಂತಹ ಪ್ರಯತ್ನಗಳಲ್ಲಿ ಭಕ್ತಿ ಮಾರ್ಗವು ಅತ್ಯುತ್ತಮವಾದುದು, ಸುಲಭವಾದುದು, ಸ್ವಾಭಾವಿಕವಾದುದು.

ಭಗವಂತನಲ್ಲಿ ಪ್ರೇಮಭಾವ ನೆಲೆಗೊಂಡರೆ ಭಕ್ತಿ ಎಂದೆನಿಸುತ್ತದೆ. ಭಕ್ತಿಯು ಹೃದಯದ ಅನರ್ಘ್ಯರತ್ನ. ಪ್ರೀತಿಯು ಮನಸ್ಸನ್ನು ಏಕಾಗ್ರಗೊಳಿಸುವಂತೆ, ಭಗವಂತನ ಮೇಲಿನ ಪ್ರೀತಿಯು ಆತನೆಡೆಗೆ ನಮ್ಮ ಮನಸ್ಸನ್ನು ಏಕಾಗ್ರಗೊಳಿಸುತ್ತದೆ. ನದಿಯು ಎಡಬಿಡದೆ ಸಾಗರಕ್ಕೆ ಹರಿಯುವಂತೆ, ಭಕ್ತಿಯು ನಿರಂತರವಾಗಿ ಪರಮಾತ್ಮನ ಕಡೆಗೆ ಅನಿಮಿತ್ತವಾಗಿ ಹರಿಯುತ್ತಿರಬೇಕು; ಆತನಿಂದ ಲೌಕಿಕವಾಗಿ ಏನನ್ನೂ ಬೇಡದ ಭಕ್ತಿಯೇ ಪರಿಪೂರ್ಣವಾದುದು; ದೈವವೇ ನಮ್ಮ ಅಂತಿಮ ಗುರಿ, ಉಳಿದವನ್ನು ಪ್ರೀತಿಸಿ ಸುಖವಿಲ್ಲ; ಏಕೆಂದರೆ ಅದರಿಂದ ಬರುವ ಸುಖ, ಆನಂದ ತಾತ್ಕಾಲಿಕ; ಹಾಗೂ ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ಎಂಬುದನ್ನರಿತ ಭಕ್ತ, ಭಗವಂತನೆಂಬ ಭೂಮವೇ ಶಾಶ್ವತವಾದ ಸುಖ, ಆನಂದ ಎಂದು ಅರಿಯುತ್ತಾನೆ. ಆತನನ್ನು ಕೇವಲ ಪ್ರೀತಿಗಾಗಿ ಮಾತ್ರಾ ಹಂಬಲಿಸುತ್ತಾನೆ. ಪರಮಾತ್ಮನಲ್ಲಿ ಒಲವಿಲ್ಲದ ಪೂಜೆ ಚಿತ್ರದ ರೂಹಿನಂತೆ ಅಪ್ಪಿದರೆ ಸುಖವಿಲ್ಲ; ಚಿತ್ರದ ಕಬ್ಬಿನಂತೆ ಮೆಲಿದರೆ ರುಚಿಯಿಲ್ಲ ಎಂದಿದ್ದಾರೆ. ಭಗವಂತನನ್ನು ಅರ್ಚಿಸುವಾಗ ತನು ಕರಗಿ, ಮನಲೀಯವಾಗಿ, ರೋಮಾಂಚನದಿಂದ ಆನಂದಾಶ್ರು ಸುರಿದು, ಕಂಠ ಗದ್ಗದಿತವಾಗುವುದೇ ಮೊದಲಾದವು ಉತ್ಕಟಭಕ್ತಿಯ ಚಿಹ್ನೆಗಳಾಗಿವೆ.

ಪರಮಾತ್ಮನು ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ, ಭಕ್ತಿಪ್ರಿಯನು ಭಕ್ತಿಕಂಪಿತನು ಎನ್ನುತ್ತಾರೆ ವಚನಕಾರರು. ಮುಂದುವರಿದು ಶಾಸ್ತ್ರ ಪುರಾಣ ವೇದ ವೇದಾಂತಗಳನ್ನು ಓದಿದ್ದರೂ, ವ್ರತನಿಯಮಗಳನ್ನು ಆಚರಿಸಿದ್ದರೂ ಭಕ್ತಿ ಇಲ್ಲದಿದ್ದರೆ ಭಗವಂತನಿಲ್ಲವೆನ್ನುತ್ತಾರೆ. ಇಂತಹ ಭಕ್ತಿಯನ್ನು ಆಚರಿಸುವುದು ಸುಲಭವಲ್ಲ; ಅದು ಗರಗಸದಂತೆ ಹೋಗುತ್ತಲೂ ಬರುತ್ತಲೂ ಕೊಯ್ಯುತ್ತದೆ; ಅಂದರೆ ಭಗವಂತನು ಭಕ್ತರನ್ನು ನಾನಾ

ಪರಿಯಾಗಿ ಪರೀಕ್ಷೆಗೆ ಗುರಿ ಮಾಡುತ್ತಾನೆ; ಅದಕ್ಕೆ ಬೆಚ್ಚದೆ ಬೆದರದೆ ಇದ್ದರೆ ಪರಮಾತ್ಮನು ಅನುಗ್ರಹಿಸುತ್ತಾನೆ. ಈ ಭಕ್ತಿ ನಿಶ್ಚಲವಾದ, ಅಕೃತ್ರಿಮವಾದ ಸರ್ವಸಮರ್ಪಣಭಾವದ ಕಿಂಕರಭಾವದ ಭಕ್ತಿಯಾಗಿರಬೇಕು. ದೇವರು ಒಲಿಯುವುದು ನಿಷ್ಕಪಟಿಗಳಿಗೆ, ದೃಢವ್ರತರಿಗೆ, ಸದಾಚಾರ ಸಂಪನ್ನರಿಗೆ ಮಾತ್ರ. ಈ ಭಕ್ತಿ ವಿಧಿಪೂರ್ವಕವಾಗಿದ್ದರೆ ವೈಧೀ ಭಕ್ತಿ, ಅಚಲಶ್ರದ್ಧೆಯ ಪ್ರೇಮವಾದರೆ ಅನುರಾಗಭಕ್ತಿ ಎಂದು ಎರಡು ಬಗೆಗಳಿವೆ. ಭಕ್ತಿಯಿಂದ ಹೃದಯ ವಿಶಾಲವಾಗಿ ಸಂಕುಚಿತ ಭಾವನೆಗಳು ದೂರವಾಗುತ್ತವೆ.

**ಆಯ್ದ ಐದು ವಚನಗಳು :**

- **ಭಕ್ತಿಯೆಂಬುದ ಮಾಡಬಾರದು**
  **ಕರಗಸದಂತೆ ಹೋಗುತ್ತ ಕೊಯ್ವುದು**
  **ಬರುತ್ತ ಕೊಯ್ವುದು**
  **ಘಟಸರ್ಪನಲ್ಲಿ ಕೈದುಡುಗಿದಡೆ**
  **ಕೂಡಲಸಂಗಮದೇವಾ ಹಿಡಿವುದ ಮಾಬುದೆ** **(ಬಸವಣ್ಣ)**

- **ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲವಯ್ಯಾ**
  **ವೇದಪ್ರಿಯ ಶಿವನೆಂಬರು ವೇದಪ್ರಿಯ ಶಿವನಲ್ಲವಯ್ಯಾ**
  **ನಾದವ ಮಾಡಿದ ರಾವಣಂಗೆ ಅರೆಯಾಯುಷ್ಯವಾಯಿತ್ತು**
  **ವೇದವನೋದಿದ ಬ್ರಹ್ಮನ ಶಿರಹೋಯಿತ್ತು!**
  **ನಾದಪ್ರಿಯನೂ ಅಲ್ಲ ವೇದಪ್ರಿಯನೂ ಅಲ್ಲ ಭಕ್ತಿಪ್ರಿಯ ನಮ್ಮ ಕೂಡಲಸಂಗಮದೇವಾ** **(ಬಸವಣ್ಣ)**

- **ರತ್ನದ ಸಂಕೋಲೆಯಾದರೆ ತೊಡರಲ್ಲವೆ?**
  **ಮುತ್ತಿನ ಬಲೆಯಾದರೆ ಬಂಧನವಿಲ್ಲವೆ?**
  **ಚಿನ್ನದ ಕತ್ತಿಯಲ್ಲಿ ತಲೆಯ ಹೊಯ್ದರೆ ಸಾಯದಿಪ್ಪರೆ ?**
  **ಲೋಕದ ಭಜನೆಯ ಭಕ್ತಿಯಲ್ಲಿ ಸಿಲುಕಿದರೆ**
  **ಜನನ ಮರಣ ಬಿಡುವುದೆ ಚನ್ನಮಲ್ಲಿಕಾರ್ಜುನ** **(ಅಕ್ಕಮಹಾದೇವಿ)**

- **ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ**
  **ಇರುಳೆಲ್ಲ ನಡೆದನಾ ಸುಂಕಕಂಜಿ**
  **ಕಳವೆಯೆಲ್ಲ ಹೋಗಿ ಬರುಗೋಣಿ ಉಳಿಯಿತ್ತು**
  **ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥಾ** **(ಜೇಡರದಾಸಿಮಯ್ಯ)**

- **ಗರ್ವದಿಂದ ಮಾಡುವ ಭಕ್ತಿ ದ್ರವ್ಯದಕೇಡು**
  **ನಡೆಯಿಲ್ಲದ ನುಡಿ ಅರಿವಿಂಗೆಹಾನಿ**
  **ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿಯಿಲ್ಲದ ಶೃಂಗಾರ**
  **ದೃಢವಿಲ್ಲದ ಭಕ್ತಿ ಅಡಿ–ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ**
  **ಮಾರಯ್ಯಪ್ರಿಯ ಅಮಲೇಶ್ವರಲಿಂಗವ ಮುಟ್ಟದ ಭಕ್ತಿ** **(ಆಯ್ದಕ್ಕಿ ಲಕ್ಕಮ್ಮ)**

## ೨. ಕಾಯಕ :

ಶರಣ ಸಂಸ್ಕೃತಿಯನ್ನು ರೂಪಿಸಿದ ಪ್ರಮುಖವಾದ ಪರಿಕಲ್ಪನೆಗಳಲ್ಲಿ ಕಾಯಕತತ್ವವೂ ಒಂದು. ಇದರಲ್ಲಿ ಶರಣರು ಕಂಡ ಆದರ್ಶ ಮತ್ತು ಆಚರಣೆಗಳ ಅರ್ಥವ್ಯಾಪ್ತಿ ಇಡೀ ವಿಶ್ವವನ್ನೇ

ಒಳಗೊಳ್ಳಬಲ್ಲಂತಹದು. 'ಕಾಯಕ' ಎಂಬುದು ಶರಣರು ವಿಚಾರಪ್ರಪಂಚಕ್ಕೆ ಕೊಟ್ಟ ಅಪೂರ್ವ ಕಾಣಿಕೆಯಾಗಿದೆ. ಇದು ಕೇವಲ ಹೊಟ್ಟೆಪಾಡಿಗಾಗಿ ಕೈಗೊಂಡ ಉದ್ಯೋಗ ಎಂಬ ಅರ್ಥವನ್ನಷ್ಟೇ ಉಳ್ಳದ್ದಲ್ಲ. ಪ್ರತಿಯೊಬ್ಬರೂ ತಮ್ಮ ಜೀವನ ನಿರ್ವಹಣೆಗಾಗಿ ಒಂದಲ್ಲ ಒಂದು ಉದ್ಯೋಗವನ್ನು ಕೈಕೊಳ್ಳಲೇಬೇಕಾದುದು ಆವಶ್ಯಕ. ಇನ್ನೊಬ್ಬರ ದುಡಿಮೆಯನ್ನು ಕುಳಿತು ತಿನ್ನುವ ಹಕ್ಕು ಯಾರಿಗೂ ಇಲ್ಲ. ಪ್ರತಿಯೊಬ್ಬರೂ ಅವರವರ ದೇಹಶ್ರಮದಿಂದಲೇ ಅವರವರ ಬದುಕು ನಡೆಸಬೇಕು. ಆದರೆ 'ಕಾಯಕ' ಎಂಬುದಕ್ಕೆ ಇಷ್ಟೇ ಅರ್ಥ ಅಲ್ಲ. ಅದರ ಅರ್ಥ ಇನ್ನೂ ವ್ಯಾಪಕವಾದುದು. ತಾನು ಕೈಗೊಂಡ ಉದ್ಯೋಗ ಸಮಾಜಕ್ಕೆ ಹಾನಿಕಾರಕವಾಗಿರಬಾರದು; ಸಮಾಜದ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು; ಅದರ ಫಲ ತನಗೆ ಮಾತ್ರವೇ ಅಲ್ಲದೆ, ಸಮಾಜಕ್ಕೂ ದೊರೆಯಬೇಕು ಎಂಬುದಕ್ಕೆ, ಶರಣರು ಹೆಚ್ಚು ಮಹತ್ವವನ್ನು ಕೊಟ್ಟರು. 'ದುಡಿಮೆ' ಮತ್ತು 'ಆರಾಧನೆ' ಈ ಎರಡರ ಸಮನ್ವಯವನ್ನು ಶರಣರು 'ಕಾಯಕ' ಎಂಬುದಾಗಿ ಕರೆದರು. ಹೀಗೆ ಕಾಯಕತತ್ವವು ತನ್ನೊಳಗೆ ಆಧ್ಯಾತ್ಮಿಕ ಸಾಧನೆಯನ್ನೂ ಒಳಗೊಂಡಿದೆ.

ಕಾಯಕತತ್ವವು ಸಾಮಾಜಿಕ ಮತ್ತು ವೈಯಕ್ತಿಕ ಜೀವನದ ಸ್ವಯಂಪೂರ್ಣತೆಯನ್ನು ಒಳಗೊಳ್ಳುತ್ತದೆ. ಇದು ಸಾಮಾಜಿಕ ಹಿತ ಮತ್ತು ವೈಯಕ್ತಿಕ ಸಾಧನೆಗಳೆರಡನ್ನೂ ಏಕಕಾಲದಲ್ಲಿ ಸಾಧಿಸುವ ಪರಿಪೂರ್ಣ ಜೀವನ ಮಾರ್ಗವಾಗಿದೆ. ವ್ಯಕ್ತಿ ಈ ಲೋಕದಲ್ಲಿ ಚೆನ್ನಾಗಿ ಬಾಳಬೇಕು, ಬದುಕಬೇಕು, ಚೆನ್ನಾಗಿ ದುಡಿಯಬೇಕು. ಆದರೆ, ಆ ದುಡಿಮೆಯ ಫಲ ತನಗೆ ಮಾತ್ರವೆಂಬ ಸ್ವಾರ್ಥ ಇಲ್ಲವಾಗಬೇಕು. ತನಗೆ ಮಾತ್ರ ತಾನು ಬದುಕದೆ, ಸಮಾಜಕ್ಕಾಗಿಯೂ ಸ್ವಲ್ಪಮಟ್ಟಿಗೆ ಬದುಕುವುದನ್ನು ಕಲಿಯಬೇಕು. ಲೋಕಸಂಸಾರದಲ್ಲಿ ತಾನೊಬ್ಬ ಸೇವಕನೆಂಬ ಭಾವನೆಯಿಂದ ದುಡಿಮೆಯ ಒಂದು ಭಾಗವನ್ನು ಸಮಾಜಕ್ಕೆ ವಿನಿಯೋಗಿಸಬೇಕು. ಆಗ ಕಾಯಕವಾಗುತ್ತದೆ. ಜಗತ್ತಿನ ಸಂಸಾರಕ್ಕಾಗಿ ಚಿಂತಿಸುತ್ತಾ, ಸತ್ಯಶುದ್ಧವಾದ ಯಾವ ಉದ್ಯೋಗವನ್ನು ಕೈಕೊಂಡರೂ ಅದು ಕಾಯಕವಾಗುತ್ತದೆ. ಆ ಅರ್ಥದಲ್ಲಿ 'ಕಾಯಕವೇ ಕೈಲಾಸ'ವೆಂಬ ಮಾತು ಬಂದಿದೆ.

ಸಮಾಜ ಸ್ವಯಂಪೂರ್ಣವಾಗಬೇಕಾದರೆ ಮತ್ತು ಸುಖಮಯವಾಗಬೇಕಾದರೆ ಎಲ್ಲರೂ ಕಾಯಕದ ಮಹತ್ವವನ್ನು ಅರಿತು ಕಾಯಕಜೀವಿಗಳಾಗಬೇಕು. ಭಿಕ್ಷೆ ಬೇಡುವುದನ್ನು ಅವರು ಕಟುವಾಗಿ ಖಂಡಿಸಿದರು. ಇನ್ನೊಬ್ಬರ ಹಂಗಿನಲ್ಲಿ ಬಾಳುವ ಜೀವನ ಒಂದು ಜೀವನವೇ ಅಲ್ಲ. ಯಾವ ಕಾಯಕದಲ್ಲಿಯೂ ಮೇಲುಕೀಳೆಂಬ ಭಾವನೆಯಿಲ್ಲದೆ ಸದ್ಗುಣಗಳಿಂದಲೇ ಯೋಗ್ಯತೆಯನ್ನು ನಿರ್ಧರಿಸುವ ಮತ್ತು ಎಲ್ಲರೂ ಸಮಾನ ಅವಕಾಶಗಳನ್ನು ಪಡೆಯಬಲ್ಲ ಆದರ್ಶ ಸಮಾಜರಚನೆ ಶರಣರ ಮಹೋದ್ದೇಶವಾಗಿತ್ತು. ವ್ಯಕ್ತಿ ಯಾವುದೇ ಉದ್ಯೋಗವನ್ನು ಕೈಕೊಂಡಿರಲಿ ಅವನಿಗೆ ತನ್ನ ಪೂರ್ಣವಿಕಾಸಕ್ಕೆ ಅವಕಾಶ ಸಿಕ್ಕಬೇಕು. ಮೇಲುಕೀಳೆಂಬುದು ಉದ್ಯೋಗಗಳಲ್ಲಿಲ್ಲ. ಅದನ್ನು ನಿರ್ವಹಿಸುವ ಮನೋಧರ್ಮದಲ್ಲಿದೆ. ಉದ್ಯೋಗಗಳು ಕಾಯಕಗಳಾಗಿ ಪರಿಣಮಿಸಿದಾಗ ಅವು ಸಾಧನೆಗೆ ಅಡ್ಡಿಯಾಗುವುದಿಲ್ಲವೆಂದು ಶರಣರು ಸಾರಿದರು ಮತ್ತು ಅದನ್ನು ಆಚರಣೆಯಲ್ಲಿ ಸಾಧಿಸಿ ತೋರಿಸಿದರು. ಮಡಿವಾಳ ಮಾಚಯ್ಯ, ಮೇದರ ಕೇತಯ್ಯ, ಅಂಬಿಗರ ಚೌಡಯ್ಯ, ತುರುಗಾಹಿ ರಾಮಣ್ಣ, ಸುಂಕದ ಬಂಕಣ್ಣ, ಮಾದಾರ ಧೂಳಯ್ಯ, ತಳವಾರ ಕಾಮಿದೇವ, ಗಾಣದ ಕನ್ನಪ್ಪ, ವೈದ್ಯ ಸಂಗಣ್ಣ, ಕೊಟ್ಟಣದ ರೆಮ್ಮವ್ವೆ, ಮೋಳಿಗೆಯ ಮಾರಯ್ಯ, ಆಯ್ದಕ್ಕಿ ಮಾರಯ್ಯ ಈ ಮೊದಲಾದ ಶರಣರು ಈ ಸಾಧನೆಯ ಸಾಕಾರಮೂರ್ತಿಗಳಾಗಿದ್ದಾರೆ. ಅವರ ಹೆಸರಿನ ಹಿಂದಿರುವ ಮಾತುಗಳು ಅವರು ಕೈಕೊಂಡ ಕಾಯಕವನ್ನು ಸೂಚಿಸುತ್ತವೆ. ಬಟ್ಟೆ ಒಗೆಯುವುದು, ಬುಟ್ಟಿ ಹೆಣೆಯುವುದು, ದೋಣಿ ನಡೆಸುವುದು, ದನ ಕಾಯುವುದು, ಮೆಟ್ಟು ಹೊಲೆಯುವುದು, ಗಾಣ ಆಡಿಸುವುದು ಇವೇ ಮೊದಲಾದ ಅನೇಕ ಉದ್ಯೋಗಗಳಲ್ಲಿದ್ದ ಶರಣರು ಅನುಭವಮಂಟಪಕ್ಕೆ ಬಂದಾಗ ಮಂತ್ರಿ ಬಸವಣ್ಣನಿಗೆ ಸರಿಸಮವಾಗಿ ಕುಳಿತು ಆಧ್ಯಾತ್ಮಿಕ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು.

ಕಾಯಕತತ್ವ ದೇಹಶ್ರಮದ ಮೇಲೆ ಆಧಾರಿತವಾಗಿರುವುದರ ಜೊತೆಗೆ ಆ ಶ್ರಮಕ್ಕೆ ತಕ್ಕಷ್ಟು ಮಾತ್ರ ಪ್ರತಿಫಲವನ್ನು ಪಡೆಯಬೇಕೆಂಬುದನ್ನು ಒತ್ತಿಹೇಳುತ್ತದೆ. ನುಲಿಯ ಚಂದಯ್ಯನ ಒಂದು ಸಾಂಕೇತಿಕ ಘಟನೆ ಇದನ್ನು ಅರ್ಥವತ್ತಾಗಿ ನಿರೂಪಿಸಿದೆ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದದ್ದು ಮಾತ್ರಾ ಲಿಂಗಕ್ಕೆ ಅರ್ಪಿತವಾಗಬೇಕು ಎನ್ನುತ್ತಾನೆ. ಶರಣ ಆಯ್ದಕ್ಕಿ ಮಾರಯ್ಯನ ಪ್ರಸಂಗವು ತನ್ನ ಅವಶ್ಯಕತೆಗಳಿಗೆ ಅಗತ್ಯವಾದಷ್ಟನ್ನು ಮಾತ್ರ ಇಟ್ಟುಕೊಳ್ಳುವ ಅಸಂಗ್ರಹತತ್ವವನ್ನು ಹೇಳುತ್ತದೆ. ನಮ್ಮ ದುಡಿಮೆಗಿಂತ ಹೆಚ್ಚಿನ ಪ್ರತಿಫಲ ಪಡೆಯುವುದು ದುರಾಸೆಯೇ ಹೊರತು ಕಾಯಕವಾಗುವುದಿಲ್ಲ. ಇಂತಹ ಆದರ್ಶವನ್ನು ಲಕ್ಕಮ್ಮನಂತಹ ಒಬ್ಬ ಸ್ತ್ರೀ ಪ್ರತಿಪಾದಿಸಿ ಆಚರಿಸಿ ಧನ್ಯಳಾದುದನ್ನು ಶರಣಸಂಸ್ಕೃತಿಯಲ್ಲಿ ಕಾಣುತ್ತೇವೆ. ಮೋಳಿಗೆಯ ಮಾರಯ್ಯ ಬೆವರು ಸುರಿಸಿ ತಂದ ಸೌದೆ ಹೊರೆಯ ಒಂದೊಂದು ಕಟ್ಟಿಗೆಯೂ ಚಿನ್ನದ ದಂಡವಾದುವು ಎಂಬ ಕತೆಯ ಹಿಂದಿರುವುದು ನಿಷ್ಠಾವಂತ ದುಡಿಮೆಗೆ ಕಟ್ಟಿದ ಆಂತರಿಕಮೌಲ್ಯ. ಹೀಗೆ ಶರಣರು ತಮ್ಮ ಆಚಾರ ವಿಚಾರಗಳಿಂದ **'ಕಾಯಕ'** ತತ್ವಕ್ಕೆ ಅಪಾರವಾದ ಅರ್ಥವ್ಯಾಪ್ತಿಯನ್ನು ತಂದುಕೊಟ್ಟರು. ಶರಣರು ಕಾಯಕವನ್ನು ದೈವತ್ವದ ಮಟ್ಟಕ್ಕೆ ಏರಿಸಿದುದು ಒಂದು ಐತಿಹಾಸಿಕ ಸಂಗತಿ.

**ಆಯ್ದ ಐದು ವಚನಗಳು :**

- **ಕಾಯಕವೆಂದು ಕಾಯವ ಬಳಲಿಸದೆ**
  **ತನುಕರಗದೆ ಮನ ನೋಯದೆ**
  **ಬೇಡಿ ಕಾಡಿ ಮಾಡುವುದು ದಾಸೋಹವೇ?**
  **ಆವ ಕಾಯಕವಾದಡೂ ಪ್ರಾಣವೇ ಕಡೆಯಾಗಿ**
  **ದ್ರವ್ಯಕಡೆಯಾಗಿ ಚಿತ್ತಶುದ್ಧದಲ್ಲಿ ಬಂದುದಕ್ಕೆ ಸರಿಗಂಡು**
  **ದೇಹಿಗಳಿಗೆ ಒಂದೇ ಪ್ರಮಾಣದಲ್ಲಿ ಸರಿಗಂಡುದು**
  **ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ತೃಪ್ತಿ** **(ಶಿವಲೆಂಕ ಮಂಚಣ್ಣ)**

- **ಕಾಯಕ ನಿರುತನಾದರೆ ಗುರುದರುಶನವಾದಡೂ ಮರೆಯಬೇಕು;**
  **ಲಿಂಗಪೂಜೆಯಾದಡೂ ಮರೆಯಬೇಕು;**
  **ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು;**
  **ಕಾಯಕವೆ ಕೈಲಾಸವಾದ ಕಾರಣ**
  **ಅಮಲೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು** **(ಆಯ್ದಕ್ಕಿಮಾರಯ್ಯ)**

- **ಗುರುವಾದಡೂ ಕಾಯಕದಿಂದಲೆ ಜೀವನ್ಮುಕ್ತಿ**
  **ಲಿಂಗವಾದಡೂ ಕಾಯಕದಿಂದಲೆ ಶಿಲೆಯ ಕುಲ ಹರಿವುದು;**
  **ಜಂಗಮವಾದಡೂ ಕಾಯಕದಿಂದಲೆ ವೇಷದ ಪಾಶ ಹರಿವುದು;**
  **ಇದು ಚನ್ನಬಸವಣ್ಣಪ್ರಿಯ ಚಂದೇಶ್ವರ ಲಿಂಗದ ಅರಿವು** **(ನುಲಿಯಚಂದಯ್ಯ)**

- **ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ,**
  **ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ**
  **ಸದ್ಭಕ್ತಂಗೆ ಎತ್ತನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು**
  **ಮಾರಯ್ಯಪ್ರಿಯ ಅಮಲೇಶ್ವರ ಲಿಂಗದ ಸೇವೆಯುಳ್ಳನ್ನಕ್ಕ** **(ಆಯ್ದಕ್ಕಿಲಕ್ಕಮ್ಮ)**

➢ **ಮಾಡುವ ಮಾಟದಿಂದವೆ ಬೇರೊಂದನರಿಯಬೇಕು;**
**ಅರಿವಿಂಗೆ ನೆಮ್ಮುಗೆ ಒಡಗೂಡಬೇಕು**
**ಅರಿವಿಂಗೆ ನೆಮ್ಮುಗೆ ಒಡಗೂಡಿದ ಬಳಿಕ,**
**ಬಯಲ ಭ್ರಮೆಯ ಕಳೆದು**
**ನಮ್ಮ ಗುಹೇಶ್ವರಲಿಂಗದಲ್ಲಿ ನಿಜಪದವನೈದುವುದು ಮಾರಯ್ಯ (ಅಲ್ಲಮಪ್ರಭು)**

## ೨. ದಾಸೋಹ :

'ದಾಸೋಹ' ಎಂಬ ಮಾತೇ ವಿಶಿಷ್ಟವಾದುದು; ಶರಣರ ಸಾಧನೆಯಿಂದ ಅದಕ್ಕೆ ಒಂದು ವಿಶಿಷ್ಟವಾದ ಮಹತ್ವಪೂರ್ಣ ಅರ್ಥ ಮತ್ತು ಶಕ್ತಿ ಲಭಿಸಿತು. 'ಶಿವೋಹಂ' 'ಸೋಹಂ' ಎಂಬ ಮಾತುಗಳು ಅಹಂಕಾರಕ್ಕೆ ಮೂಲವಾಗಬಲ್ಲವು. ಉಳಿದುದೆಲ್ಲವೂ 'ಮಾಯೆ' ಎಂಬ ಭ್ರಮೆಯಿಂದ ಜೀವನದ ವಿಮುಖತೆಗೆ ಕಾರಣವಾಗಬಹುದು. ಆದರೆ 'ದಾಸೋಹಂ' ಎಂಬುದು ಅಹಂಕಾರದ ಗೋಡೆಗಳನ್ನು ಕೆಡವಿ, ಸಮಾಜಕ್ಕೆ ನಾನು ಸೇವಕ ಎಂಬ ಕರ್ತವ್ಯಪ್ರಜ್ಞೆಯನ್ನು ಸದಾ ಜಾಗೃತವಾಗಿಟ್ಟಿರುತ್ತದೆ. ಆದುದರಿಂದಲೇ 'ಸೋಹಂ' ಎಂದೆನಿಸದಿರಯ್ಯ 'ದಾಸೋಹಂ' ಎಂದೆನಿಸಯ್ಯ ಎಂಬುದು ಬಸವಣ್ಣನವರ ಪ್ರಾರ್ಥನೆ. 'ದಾಸೋಹಂ' ಎಂಬ ಮಾತಿನಲ್ಲಿಯೇ ಅಹಂಕಾರವನ್ನಳಿದ ಕಿಂಕುರ್ವಾಣತೆ ವ್ಯಕ್ತವಾಗುತ್ತದೆ. ಅರ್ಥ, ಪ್ರಾಣ, ಅಭಿಮಾನಗಳನ್ನು ದಾಸೋಹ ಶುದ್ಧಮಾಡುತ್ತದೆ. ಆ ಮೂಲ ಆಕರಗಳು ಶುದ್ಧವಾಗಿ ಬಿಟ್ಟರೆ ಅದರಿಂದ ಹೊಮ್ಮುವ ಕ್ರಿಯಾಧಾರೆ ಸಹಜವಾಗಿಯೇ ಶುದ್ಧವಾಗುತ್ತವೆಂಬುದು ಶರಣರ ದೃಷ್ಟಿ. ಇದರಿಂದ ದಾಸೋಹದಲ್ಲಿ ಕಾಯಕತತ್ವವೂ ಅಥವಾ ಕಾಯಕತತ್ವದಲ್ಲಿ ದಾಸೋಹತತ್ವವೂ ಒಳಗೊಳ್ಳುತ್ತದೆ.

ಕಾಯಕದಿಂದಲ್ಲದೆ ದಾಸೋಹ ನಡೆಯಲಾರದು. ಗುರುಲಿಂಗ ಜಂಗಮಕ್ಕೆ ದಾಸೋಹವನ್ನು ಮಾಡಬೇಕಾದರೆ ಸತ್ಯಶುದ್ಧ ಕಾಯಕದಿಂದ ಕಾಯವನ್ನು ಬಳಲಿಸಬೇಕು. ದೇಹಶ್ರಮದ ದುಡಿಮೆಯಿಂದ ತಂದುದಲ್ಲದೆ ಇತರ ಆಡಂಬರದ ವಸ್ತುಗಳು ಲಿಂಗಕ್ಕೆ ಅರ್ಪಿತವಾಗವು ಎನ್ನುತ್ತಾರೆ ಶರಣರು. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಮಾತ್ರಾ ಲಿಂಗಕ್ಕೆ ಅರ್ಪಿತ, ದುರಾಶೆಯಿಂದ ಬಂದುದು ಅನರ್ಪಿತ ಎಂಬುದು ಚಂದಯ್ಯನ ಮಾತು. ಹೀಗೆ ಪೂಜೆ–ದುಡಿಮೆಗಳೆರಡೂ ಇಲ್ಲಿ ಬೆಸುಗೆಗೊಂಡವು. ಶರಣರ ಭಕ್ತಿಸಾಧನೆ ಗುರು–ಲಿಂಗ–ಜಂಗಮಗಳಲ್ಲಿ ತ್ರಿಮುಖವಾಗಿ ಬೆಳೆದು ಅವುಗಳಿಗೆ ತನು–ಮನ–ಧನವನ್ನು ಅರ್ಪಿಸುವ ತ್ರಿವಿಧದಾಸೋಹದ ಮೂಲಕ ಅಷ್ಟಾವರಣಗಳಲ್ಲಿ ನಡೆದು ಷಟ್ಸ್ಥಲ ಸಾಧನೆ ಮಾಡುವ ಗುರಿಯನ್ನು ಸಾಧಿಸಿತು. ತ್ರಿವಿಧ ದಾಸೋಹದ ಮೂಲಕ ಅಹಂಭಾವನೆಯಳಿದು ಭೃತ್ಯಾಚಾರದ ಮೂಲಕ ಪ್ರಪಂಚಕ್ಕೇ ತಮ್ಮನ್ನು ಅರ್ಪಿಸಿಕೊಂಡು ಸಮಷ್ಟಿ ಹಿತಸಾಧನೆಗಾಗಿ ಕೈಕೊಳ್ಳುವ ದಾಸೋಹವು ಭಕ್ತನನ್ನು ನಿರ್ಲಿಪ್ತತೆಯ ಕಡೆಗೆ ಒಯ್ಯುತ್ತದೆ. ಇದರಿಂದ ವ್ಯಷ್ಟಿಯ ಆಧ್ಯಾತ್ಮ ಸಾಧನೆಯಂತೆಯೇ ಸಮಷ್ಟಿಯ ಹಿತಸಾಧನೆಯೂ ಆಯಿತು.

**ಆಯ್ದ ೫ ವಚನಗಳು :**

➢ **ಸೋಹಂ ಎಂದಡೆ ಅಂತರಂಗದ ಗರ್ವ**
**ಶಿವೋಹಂ ಎಂದಡೆ ಬಹಿರಂಗದ ಅಹಂಕಾರ**
**ಈ ಉಭಯವನಳಿದು ದಾಸೋಹಂ ಭಾವವನೆ ಕರುಣಿಸಿ ಬದುಕಿಸಯ್ಯಾ ಅಖಂಡೇಶ್ವರಾ**
**(ಷಣ್ಮುಖ ಶಿವಯೋಗಿ)**

➢ ಶಾಸ್ತ್ರ ಘನವೆಂಬೆನೆ, ಕರ್ಮವ ಭಜಿಸುತ್ತಿದೆ
ವೇದ ಘನವೆಂಬೆನೆ, ಪ್ರಾಣಿವಧೆಯ ಹೇಳುತ್ತಿದೆ
ಸ್ಮೃತಿ ಘನವೆಂಬೆನೆ, ಮುಂದಿಟ್ಟರಸುತ್ತಿದೆ
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ ತ್ರಿವಿಧದಾಸೋಹದಲ್ಲಲ್ಲದೆ
ಕಾಣಬಾರದು ಕೂಡಲ ಸಂಗಮದೇವ (ಬಸವಣ್ಣ)

➢ ದೇಹ ನಿರ್ದೇಹವೆನುತಿಪ್ಪರಯ್ಯಾ
ದೇಹ ನಿರ್ದೇಹವಪ್ಪ ಮರ್ಮವನರಿಯರು
ಅಹಂ ಎಂಬುದೇ ದೇಹ
'ದಾಸೋಹಂ' ಎಂಬುದೇ ನಿರ್ದೇಹ ನೋಡಾ !
'ಅಕಾಯೋ ಭಕ್ತಕಾಯೋ ವಾ' ಎಂದುದಾಗಿ
ಅಹಂಭಾವವಳಿದವರು
ಕೂಡಲ ಚನ್ನಸಂಗಯ್ಯನಲ್ಲಿ ನಿರ್ದೇಹಿಗಳೆಂಬೆ. (ಚನ್ನಬಸವಣ್ಣ)

➢ ಪ್ರಣತೆಯೂ ಇದೆ, ಬತ್ತಿಯೂ ಇದೆ, ಜ್ಯೋತಿಯ
ಬೆಳಗುವಡೆ ತೈಲವಿಲ್ಲದೆ ಪ್ರಭೆ ತಾನೆಲ್ಲಿಯದೊ?
ಗುರುವಿದೆ, ಲಿಂಗವಿದೆ, ಶಿಷ್ಯನ ಸುಜ್ಞಾನೋದಯವಾಗದನ್ನಕ್ಕರ
ಭಕ್ತಿ ಎಲ್ಲಿಯದೊ? ಸೋಹಂ ಎಂಬುದ ಕೇಳಿ
ದಾಸೋಹವ ಮಾಡದಿದ್ದರೆ ಅತಿಗಳೆವೆ ಗುಹೇಶ್ವರ (ಅಲ್ಲಮಪ್ರಭು)

➢ ಜನ್ಮಜನ್ಮಕ್ಕೆ ಹೋಗಲೀಯದೆ 'ಸೋಹಂ' ಎಂದೆನಿಸದೆ,
'ದಾಸೋಹಂ' ಎಂದೆನಿಸಯ್ಯ,
ಲಿಂಗ ಜಂಗಮದ ಪ್ರಸಾದವ ತೋರಿ ಬದುಕಿಸಯ್ಯ
ಕೂಡಲಸಂಗಮದೇವ (ಬಸವಣ್ಣ)

**೫. ಅನುಭವಮಂಟಪ :**

'ಅನುಭವಮಂಟಪ' ಮಾನವಧರ್ಮ ವಿಕಾಸದ ಇತಿಹಾಸದಲ್ಲಿ ಒಂದು ಅಪೂರ್ವ ನಿರ್ಮಾಣ ಮತ್ತು ವಿಶಿಷ್ಟಕೊಡುಗೆ. ಅದು ಕ್ರಾಂತಿಕಾರಕ ಸಾಮಾಜಿಕ ಪರಿವರ್ತನೆ, ಸರ್ವೋದ್ಧಾರಕ ಧಾರ್ಮಿಕ ಸಮತೆ, ಉಜ್ವಲ ಆಧ್ಯಾತ್ಮಿಕ ಅನುಭವಗಳ ಮುಪ್ಪುರಿ. ಅದರ ಸ್ವರೂಪ, ಅದರ ಕಾರ್ಯಕ್ಷೇತ್ರ, ಕಾರ್ಯವಿಧಾನ, ಸಾಧನೆ, ಸಿದ್ಧಿಗಳು ಅನುಪಮ. ಬಸವಣ್ಣನವರ ಕ್ರಾಂತಿಕಾರಕವಾದ ವಿಚಾರಪ್ರಚೋದಕವಾದ ಮಾರ್ಗದ ಫಲವಾಗಿಯೇ ವಿವಿಧ ಅಭಿಪ್ರಾಯಗಳ ಸಂಘರ್ಷಣೆಯ ಮುಕ್ತಮನಸ್ಸಿನ ನೆಲೆಯ ಹಿನ್ನೆಲೆಯಲ್ಲಿ ಸಹಜವಾಗಿ ಬೆಳೆದು ಬಂದುದು 'ಅನುಭವಮಂಟಪ'.

ಅನುಭವಮಂಟಪದ ಅಸ್ತಿತ್ವದ ವಿಚಾರವಾಗಿ ಕೆಲವರು ಸಂದೇಹ ಎತ್ತಿದ್ದುಂಟು. ಆದರೆ ಇಂತಹ ಎಲ್ಲ ಅಭಿಪ್ರಾಯಗಳನ್ನೂ ಶ್ರೀ ಉತ್ತಂಗಿ ಚೆನ್ನಪ್ಪನವರು ಕೂಲಂಕಷವಾಗಿ ವಿವೇಚಿಸಿ ಸಂದೇಹಕ್ಕೆಡೆಯಿಲ್ಲದಂತೆ ಅದರ ಐತಿಹಾಸಿಕತೆಯನ್ನು ತಮ್ಮ 'ಅನುಭವಮಂಟಪದ ಐತಿಹಾಸಿಕತೆ' ಕೃತಿಯಲ್ಲಿ ಸ್ಥಾಪಿಸಿದ್ದಾರೆ. ಅವರು ಹೇಳುವಂತೆ ಅನುಭವದ ವಿನಿಮಯಕ್ಕಾಗಿ ಶಿವಾನುಭಾವಿಗಳು ಯಾವ ಸ್ಥಳದಲ್ಲಿ ಸಭೆಯಾಗಿ ಕೂಡಿರುವರೋ ಅದೇ 'ಅನುಭವಮಂಟಪ' ಎನಿಸುವುದು. ಇದಕ್ಕೆ ಕಲ್ಲಿನಿಂದ ಕಟ್ಟಿದ ನಾಲ್ಕು ಗೋಡೆಗಳಾಗಲೀ, ಭವ್ಯವಾದ

ಮಂದಿರವಾಗಲೀ, ಅದರ ಮುಂದೆ ಅನುಭವಮಂಟಪವೆಂದು ದೊಡ್ಡ ಅಕ್ಷರಗಳಿಂದ ಕೆತ್ತಿದ ಒಂದು ಬೋರ್ಡಾಗಲೀ ಇರುವ ಅಗತ್ಯತೆ ಇಲ್ಲ'. ಬಸವಣ್ಣನವರ ಮಹತ್ವವನ್ನು ಕೇಳಿ ದೇಶದ ನಾನಾ ಭಾಗಗಳಿಂದ ಶಿವಾನುಭಾವಿಗಳು ಕಲ್ಯಾಣಕ್ಕೆ ಬರುತ್ತಿದ್ದರು. ಅವರೂ ಸ್ಥಳೀಯರಾದ ಅನುಭಾವಿಗಳು ಎಲ್ಲರೂ ಸೇರಿದಾಗ ಅನುಭಾವಗೋಷ್ಠಿ ನಡೆಯುತ್ತಿತ್ತು. ಎಲ್ಲಿ ಅವರು ಗೋಷ್ಠಿ ಸೇರುತ್ತಿದ್ದರೋ ಅದೇ ಅನುಭವಮಂಟಪ. ಅದಕ್ಕೆ 'ಅನುಭವಗೋಷ್ಠಿ', 'ಗೀತಗೋಷ್ಠಿ', 'ತತ್ವಗೋಷ್ಠಿ', 'ಶಿವತತ್ವಗೋಷ್ಠಿ', 'ಮಹಾಮನೆ' 'ಶಿವಾನುಭವ ಮಂಟಪ' ಎಂಬ ಹೆಸರುಗಳೂ ಇದ್ದಂತೆ ತೋರುತ್ತದೆ. ಅದು ಬಹುಶಃ ಬಸವಣ್ಣನವರ ಮಹಾಮನೆಯ ಒಂದು ಭಾಗ ಆಗಿದ್ದಿರಬಹುದು. ಒಟ್ಟಾರೆ ಬಸವಣ್ಣನವರ ಕಾರ್ಯಕ್ಷೇತ್ರದಲ್ಲಿ ವಿಚಾರಮಥನ ರೂಪವಾದ ಈ ಅನುಭವಮಂಟಪ ಬಹಳ ಪ್ರಮುಖ ಪಾತ್ರವಹಿಸಿತು.

ಜೀವನದ ಎಲ್ಲ ಮುಖಗಳನ್ನೂ ಕುರಿತು ಅಲ್ಲಿ ನಡೆಯುತ್ತಿದ್ದ ಸ್ವತಂತ್ರ ವಿಚಾರಮಥನ ಕರ್ನಾಟಕದಿಂದಷ್ಟೇ ಅಲ್ಲ ಭರತಖಂಡದ ಅನೇಕ ಭಾಗಗಳಿಂದ ಜನರನ್ನು ಆಕರ್ಷಿಸಿತು. ಕಾಶ್ಮೀರದಿಂದ ರಾಜ ಮಹಾದೇವಭೂಪಾಲ, ದಕ್ಷಿಣದ ಸಕಲೇಶಮಾದರಸ, ಗುಜರಾತಿನ ಆದಯ್ಯ, ಕಳಿಂಗದ ಮರುಳುಶಂಕರದೇವ, ಆಂಧ್ರದ ಮೈದುನರಾಮಯ್ಯ ಮೊದಲಾದ ಸಾಧಕರು ಬಂದು ಅನುಭವಮಂಟಪದ ನೆರಳಿನಲ್ಲಿ ಬೆಳೆದು ಶರಣರಾದರು.

ಜಾತಿಕುಲಗಳ ಅಂತರವಿಲ್ಲದೆ, ಸ್ತ್ರೀಪುರುಷರೆಂಬ ಭೇದವಿಲ್ಲದೆ, ಮೇಲುಕೀಳುಗಳ ತಾರತಮ್ಯವಿಲ್ಲದೆ ಎಲ್ಲರಿಗೂ ಅಲ್ಲಿ ಮುಕ್ತಪ್ರವೇಶವಿತ್ತು. ಎಲ್ಲ ಕಾಯಕಗಳವರೂ ಅಲ್ಲಿ ಸರ್ವಸಮಾನ ಸ್ಥಾನದಲ್ಲಿ ಕುಳಿತು ಆಧ್ಯಾತ್ಮಿಕ ಚರ್ಚೆಗಳನ್ನು ನಡೆಸುತ್ತಿದ್ದರು. ಈ ಅನುಭಾವ ಗೋಷ್ಠಿಗೆ ಅಲ್ಲಮಪ್ರಭುವಿನಂತಹ ಮಹಾ ಅನುಭಾವಿಯು ಮಾರ್ಗದರ್ಶಕಶಕ್ತಿಯಾಗಿ ದೊರೆತುದು ಅನುಭವಮಂಟಪದ ಪುಣ್ಯವಿಶೇಷವಾಗಿತ್ತು. ಆತ ಏರಿದ ಪೀಠವನ್ನು 'ಶೂನ್ಯಸಿಂಹಾಸನ' ಎಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ. ರೂಪವನ್ನು ಧರಿಸಿದ್ದರೂ ರೂಪಕ್ಕೆ ಅತೀತನಾದ, ಆಕಾರವಿದ್ದರೂ ನಿರಾಕಾರನಾದ ಶೂನ್ಯಮೂರ್ತಿ ಅಲ್ಲಮಪ್ರಭು ಕುಳಿತು ಶೂನ್ಯತತ್ವಗಳನ್ನು ಬೋಧಿಸುವ ಪೀಠ 'ಶೂನ್ಯಸಿಂಹಾಸನ', ಇದರ ಕಲ್ಪನೆ ಅದ್ಭುತವಾದುದು. ಬಸವಣ್ಣನವರು ಕಂಡ ಮಹತ್ತರವಾದ ಆದರ್ಶಗಳ ಕನಸು ಪ್ರಭುದೇವನ ನೇತೃತ್ವದಲ್ಲಿ ಅನುಭವಮಂಟಪದ ಮೂಲಕ ಕಾರ್ಯಗತವಾಗತೊಡಗಿತು. ಶರಣರು ಅಲ್ಲಿ ಬಿಚ್ಚುಮನಸ್ಸಿನಿಂದ ಸಾಮಾಜಿಕ, ಆಧ್ಯಾತ್ಮಿಕ, ತಾತ್ವಿಕ ಮೊದಲಾದ ಎಲ್ಲ ಸಮಸ್ಯೆಗಳನ್ನೂ ಚರ್ಚಿಸುತ್ತಿದ್ದರು. ಅದರ ಫಲವಾಗಿ ಉಂಟಾದ ಅನುಭವಗಳನ್ನು ವಚನಗಳಲ್ಲಿ ಒಡಮೂಡಿಸುವ, ಅದನ್ನು ಬರೆದು ಸಂಕಲಿಸುವ ಕಾರ್ಯವೂ ಶರಣ ಶಾಂತರಸನಿಂದ ನಡೆಯುತ್ತಿತ್ತು. ೧೫ನೆಯ ಶತಮಾನದಲ್ಲಿ ರಚಿತವಾದ, 'ಶೂನ್ಯಸಂಪಾದನೆ' ಕೃತಿಗೆ ಮೂಲ ಪ್ರಚೋದನೆ ಅನುಭವಮಂಟಪದಲ್ಲಿ ನಡೆದ ಸಂಭಾಷಣಾರೂಪದ ವಚನಗಳು. 'ಅನುಭವಮಂಟಪ'ವನ್ನು ವಿಶ್ವದ ಮೊದಲ ಪ್ರಜಾಪ್ರಭುತ್ವ ಸಭೆ ಎಂದೇ ಗುರುತಿಸುತ್ತಾರೆ. ಧಾರ್ಮಿಕ ಮತ್ತು ಸಾಮಾಜಿಕ ರಂಗದ ಮೇಲೆ ಅದರ ಪರಿಣಾಮ ಗಾಢವಾಗಿತ್ತು. ಬಸವಣ್ಣನವರು ಕಂಡ ಪರಿಪೂರ್ಣ ಸಮಾಜದ ಆಶಯ ಆದರ್ಶಗಳು ಇಲ್ಲಿ ಚರ್ಚಿತವಾದುವು. ಅವರ ಮುಂದಿದ್ದ ಪ್ರಖರವಾದ ಉದ್ದೇಶ, ಧರ್ಮದ ಹೆಸರಿನಲ್ಲಿ ನಡೆಯುವ ದುರಾಚಾರಗಳನ್ನೂ ಸುಲಿಗೆಯನ್ನೂ ತಪ್ಪಿಸಬೇಕು; ಧರ್ಮದ ಫಲಗಳು ಎಲ್ಲರಿಗೂ ಲಭಿಸುವಂತಾಗಬೇಕು; ಧಾರ್ಮಿಕ ಸಮಾನತೆ ಸಾಧಿತವಾಗಬೇಕು ಎಂಬುದು. ಇದನ್ನು ಸಾಧಿಸುವುದಕ್ಕೆ ಅವರಿಗೆ ತೋರಿದ ಸಾಧನ 'ಇಷ್ಟಲಿಂಗ'. ಈ ಇಷ್ಟಲಿಂಗದ ಸ್ವರೂಪ ಮತ್ತು ವ್ಯಾಪ್ತಿಗಳು ಅನುಭವಮಂಟಪದ ಚರ್ಚೆಗೆ ಗುರಿಯಾಗಿ ಸ್ಪಷ್ಟವಾದವು.

## ಆಯ್ದ ೫ ವಚನಗಳು :

- ಪ್ರಣವದ ಬೀಜವ ಬಿತ್ತಿ, ಪಂಚಾಕ್ಷರಿಯ ಬೆಳೆಯ ಬೆಳೆದು
  ಪರಮಪ್ರಸಾದವನೊಂದು ರೂಪಮಾಡಿ ಮೆರೆದು
  ಭಕ್ತಿ ಫಲವನುಂಡಾತ ನಮ್ಮ ಬಸವಯ್ಯನು.
  ಚೆನ್ನಬಸವನೆಂಬ ಪ್ರಸಾದಿಯ ಪಡೆದು
  ಅನುಭವಮಂಟವನನುಮಾಡಿ
  ಅನುಭವಮೂರ್ತಿಯಾದ ನಮ್ಮ ಬಸವಯ್ಯ. (ನೀಲಲೋಚನೆಯಮ್ಮ)

- ಮರಮರ ಮಥನಿಸಿ ಕಿಚ್ಚುಹುಟ್ಟಿ
  ಸುತ್ತಣ ತರುಮರಾದಿಗಳ ಸುಡಲಾಯಿತ್ತು
  ಆತ್ಮವಾತ್ಮಮಥನಿಸಿ ಅನುಭಾವಹುಟ್ಟಿ
  ತನುಗುಣಾದಿಗಳ ಸುಡಲಾಯಿತ್ತು
  ಇದುಕಾರಣ ನಿಮ್ಮ ಮಹಾನುಭಾವಿಗಳ ಅನುಭಾವವ ತೋರಿ
  ಎನ್ನೊಡಲನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನ (ಅಕ್ಕಮಹಾದೇವಿ)

- ಕಾಯದ ಮದವಳಿದಲ್ಲದೆ ಮಾಯಾ ವಿಕಾರವಳಿಯದು
  ಮಾಯಾ ವಿಕಾರ ಹಿಂಗಿದಲ್ಲದೆ ಭವನಾಶವಾಗದು
  ಭವನಾಶವಾದಲ್ಲದೆ ಲಿಂಗಸಂಬಂಧವಳವಡದು
  ಲಿಂಗ ಸಂಬಂಧವಳವಟ್ಟಲ್ಲದೆ ಸುಖವು ಸಾಧ್ಯವಾಗದು
  ಅನುಪಮ ಸುಖ ಪರಿಣಾಮಕ್ಕೆ ಮಹಾನುಭಾವಿಗಳ ಸಂಗದಲ್ಲಲ್ಲದೆ ವಿಶ್ರಾಮವಿಲ್ಲ.
  ಇಂತಪ್ಪ ಮಹಾನುಭಾವದ ಮೂರ್ತಿ ಸಂಗನ ಬಸವಣ್ಣನ
  ಕೃಪೆಯಿಂದಲೆನಗೆ ನಿಜವು ಕಾಣ ಬಂದಿತ್ತು.
  ಇದುಕಾರಣ, ನಿಜಗುರು ಶಂಕರದೇವರ ಶರಣ
  ಪ್ರಭುದೇವರ ಶ್ರೀಪಾದದ ಕಂಡು ನಿಶ್ಚಿಂತ ನಾದೆನಯ್ಯಾ (ಶಂಕರ ದಾಸಿಮಯ್ಯ)

- ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು
  ಅನುಭಾವವಿಲ್ಲದ ಲಿಂಗ ಸಮರಸಸುಖಕ್ಕೆ ನಿಲುಕದು
  ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು
  ಅನುಭಾವವಿಲ್ಲದೆ ಏನನೂ ಅರಿಯಬಾರದು
  ತನ್ನಲ್ಲಿ ಸನ್ನಿಹಿತ ಉಳ್ಳಡೆ ಶಿವಶರಣಸಂಗವೇತಕ್ಕೆನಲುಂಟೆ?
  ಕೂಡಲಸಂಗಮದೇವಯ್ಯ, ನಿಮ್ಮ ಅನುಭಾವವ ಮಾತಿನ ಮಥನವೆಂದು ನುಡಿಯ ಬಹುದೇ?
  (ಬಸವಣ್ಣ)

- ವೃಕ್ಷವಾಸಿಯಾಗಿದ್ದು, ಭಿಕ್ಷಪರಿಣಾಮಿಯಾಗಿರ್ದರೇನು?
  ಉಟ್ಟುದನಳಿದು ಬತ್ತಲೆಯಾದರೇನು?
  ಕಾಲರಹಿತನಾದರೇನು? ಕರ್ಮರಹಿತನಾದರೇನು?
  ಕೂಡಲಚನ್ನಸಂಗನ ಅನುಭಾವವರಿಯದವರು
  ಏಸುಕಾಲ ಇರ್ದರೇನು? ವ್ಯರ್ಥಕಾಣಿರೋ. (ಚನ್ನಬಸವಣ್ಣ)

## ೫. ದೇಗುಲ

ಶರಣಧರ್ಮ ದೇಗುಲ ಸಂಸ್ಕೃತಿಯನ್ನು ನಿರಾಕರಿಸಿತು; ಆದರೆ ದೇವರ ಅಸ್ತಿತ್ವವನ್ನು ನಿರಾಕರಿಸಲಿಲ್ಲ. ಆ ಬಗೆಗೆ ಕೇವಲ ತತ್ವಜಿಜ್ಞಾಸೆಗಳಿಗಿಂತ ಧಾರ್ಮಿಕ ವಿಚಾರಗಳಿಗೆ, ನೈತಿಕ ಆಚರಣೆಗಳೀಗೆ, ತತ್ವಾನುಭವಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿತು. ದೇಹವನ್ನೇ ದೇಗುಲ ಎಂದು ಪರಿಭಾವಿಸಿತು. ಅವರ ಪ್ರಕಾರ ಭಗವಂತನಿಂದ ದೂರಸರಿದು ಬಂದಿರುವ ಜೀವಾತ್ಮಗಳು ಆತನ ಸಾಮೀಪ್ಯಕ್ಕಾಗಿ ಪ್ರಾರ್ಥನೆಯ ಮೂಲಕ ಹಾತೊರೆಯುತ್ತಾರೆ. ಅದು ಅವರ ಕ್ರಿಯಾಶಕ್ತಿಯನ್ನು ಹೆಚ್ಚಿಸುತ್ತದೆ. ಕಲ್ಯಾಣದ ಶರಣರ ಉತ್ಕ್ರಾಂತಿಯ ಅತ್ಯುತ್ಕೃಷ್ಟ ಫಲವೆಂದರೆ ಆಧ್ಯಾತ್ಮವನ್ನು ಇಷ್ಟಲಿಂಗದ ಪೂಜೆಯ ಮೂಲಕ ಪ್ರತಿಯೊಬ್ಬರಿಗೂ ಮುಟ್ಟಿಸಿದ್ದು. ಆಧ್ಯಾತ್ಮದ ಚಿಂತನೆಯನ್ನು ಅತ್ಯಂತ ವೈಚಾರಿಕ ನೆಲೆಯಲ್ಲಿ ಶರಣರು ಪ್ರತಿಪಾದಿಸಿದರು. ಹಾಗಾಗಿ ಸೃಷ್ಟಿ, ಸೃಷ್ಟಿಕರ್ತ, ಜೀವ, ಶಿವ–ಜೀವರ ಸಂಬಂಧ, ಭವಬಂಧನ, ಬಿಡುಗಡೆ ಬಗೆಗಿನ ಅವರ ವಿಚಾರಗಳು ಅತ್ಯಂತ ವಿಶಿಷ್ಟವಾಗಿವೆ, ಅನನ್ಯವಾಗಿವೆ.

ಶಿವನ ಅಷ್ಟತನುಗಳಲ್ಲಿ ಆತ್ಮವೂ ಒಂದು. ಅದು ಅವಿದ್ಯೆಯಿಂದ ಸ್ವಸ್ವರೂಪವನ್ನು ಮರೆತು ಜೀವರುಗಳಾಗಿ ಅಶುದ್ಧವಾಗಿವೆ. ಅದು ಗುರುವಿನಿಂದ ಇಷ್ಟಲಿಂಗ ದೀಕ್ಷೆ ಪಡೆದಾಗಲೇ ಶುದ್ಧ ಜೀವವಾಗಿ 'ಅಂಗ' ಎನಿಸಿಕೊಳ್ಳುತ್ತದೆ. ಅರಿವಿನ ಮಾರ್ಗದ ತನ್ನ ಸಾಧನೆಯಿಂದ ಅಂಗವು ತನ್ನ ಅಪೂರ್ಣತ್ವವನ್ನು ಕಳೆದುಕೊಂಡು ನೀರಿನ ಹನಿ ಸಮುದ್ರವನ್ನು ಸೇರುವಂತೆ ಶಿವಲಿಂಗದಲ್ಲಿ ಕೂಡಿ ಪೂರ್ಣತ್ವವನ್ನು ಪಡೆದು ಲಿಂಗಾಂಗ ಸಾಮರಸ್ಯ ಹೊಂದುವುದೇ ಮೋಕ್ಷವೆನಿಸಿಕೊಳ್ಳುತ್ತದೆ. ಅದಕ್ಕೆ ಜೀವಾತ್ಮನಾದ ಅಂಗವು ಲಿಂಗವಾಗುವ ಪರಿಪೂರ್ಣತೆಯ ಕಡೆಗಿನ ತನ್ನ ಯಾತ್ರೆಯ ಮಾರ್ಗದಲ್ಲಿ ಏರಬೇಕಾದ ಆರು ಮೆಟ್ಟಿಲುಗಳೇ ಷಟ್ಸ್ಥಲಗಳು. ಅದಕ್ಕೆ ಪೂರಕವಾಗಿ ಅಷ್ಟಾವರಣಗಳು, ಪಂಚಾಚಾರಗಳು ಬರುತ್ತವೆ. ಶರಣರ ದೃಷ್ಟಿಯಲ್ಲಿ ಜೀವನಿಗೂ ದೇವನಿಗೂ, ವ್ಯಕ್ತಿಗೂ ಇಷ್ಟಲಿಂಗಕ್ಕೂ ನಡುವೆ ನಡೆಯುವ ಸಂಬಂಧ ಶರಣಸತಿ–ಲಿಂಗಪತಿಗೂ ನಡೆಯುವ ಸಂಬಂಧದಂತೆ ನೇರವಾದುದು. ಅದಕ್ಕೆ ಮೂರನೆಯವರಾದ ಪುರೋಹಿತರ, ಪೂಜಾರಿಗಳ ಅಗತ್ಯವಿಲ್ಲ; ದೇವಾಲಯಗಳ ಅಗತ್ಯವೂ ಇಲ್ಲ. ತನ್ನಾಶ್ರಯದ ರತಿಸುಖವನ್ನು, ತಾನುಂಬ ಊಟವನ್ನು ಹೇಗೆ ಬೇರೆಯವರ ಕೈಯಲ್ಲಿ ಮಾಡಿಸಲು ಬರುವುದಿಲ್ಲವೋ ಹಾಗೆಯೇ ಪೂಜೆಯೂ ಕೂಡಾ ತಾನೇ ಕೈಯಾರೆ ತನು ಮುಟ್ಟಿ, ಮನಮುಟ್ಟಿ ಮಾಡಬೇಕಾಗುತ್ತದೆ. ಆ ಮೂಲಕವೇ ಶರೀರವೆಂಬ ಹಾವಿನಬುಟ್ಟಿಯಲ್ಲಿರುವ ಮನವೆಂಬ ಘಟಸರ್ಪವನ್ನು ಮೆತ್ತಗಾಗಿಸುವ ಗಾರುಡಿಗತನವನ್ನು ಪ್ರಾಪ್ತವಾಗಿಸಿಕೊಳ್ಳಬೇಕಾಗುತ್ತದೆ; ಆ ಮೂಲಕ ದೈವಸಾಕ್ಷಾತ್ಕಾರ ಮಾಡಿಕೊಳ್ಳಬೇಕಾಗುತ್ತದೆ. ಇದನ್ನು ಮನುಷ್ಯರು ಮೃತ್ಯು ಮುಟ್ಟದ ಮುನ್ನವೇ ಮಾಡಬೇಕಾಗುತ್ತದೆ. ಮಾಡುವ ಪೂಜೆಯು ಕಾಟಾಚಾರವಾಗದೆ ನಿಜಭಕ್ತಿ ಪ್ರೇಮದಿಂದ ಸಮರತಿ ಸಮಕಳೆ ಸಮಸುಖದ ನೆಲೆಯಲ್ಲಿರಬೇಕಾಗುತ್ತದೆ. ನದಿಯಲ್ಲಿ ನದಿ ಸೇರಿದಂತೆ ಲಿಂಗಾರ್ಚನೆಯಲ್ಲಿ ಒಂದಾಗಿ ಬೆರೆತಾಗಲೇ ಆತ್ಮ ಸಾಕ್ಷಾತ್ಕಾರವುಂಟಾಗುತ್ತದೆ.

ಈ ಜಗತ್ತಿನ ಕಷ್ಟಕೋಟಲೆಗಳಲ್ಲಿ ಸಿಲುಕಿ ನರಳುವಾಗ ನಮಗೆ ನೆರವಾಗುವ ಕರುಣಾಮಯಿ ಪ್ರೇಮಮಯಿ ಭಗವಂತನೊಬ್ಬನಿದ್ದಾನೆಂಬ ನಂಬಿಕೆ ಆರಂಭದ ಹಂತದಲ್ಲಿ ಭಕ್ತನಿಗೆ ಆನಂದವನ್ನೂ ಸಮಾಧಾನವನ್ನೂ ಉಂಟುಮಾಡುತ್ತದೆ. ಆ ನಂಬಿಕೆಯ ನೆಲೆಯಲ್ಲಿ ಭಕ್ತಿಯ ಮೂಲಕ ನಿಷ್ಕಾಮ ಪ್ರೀತಿಯಲ್ಲಿ ಮುಳುಗಿ ಏಳಬೇಕು. ಏಕೆಂದರೆ ಆತ ಭಕ್ತಿಪ್ರಿಯ. ಕೇವಲ ಅವನೊಂದಿಗಿನ ಸತ್ಯವೇ ಶಾಶ್ವತ ಸುಖಾನಂದ. ಅಂತಹ ದೈವವನ್ನೊಲಿಸುವುದೇ ಆತನ ಗುರಿಯಾಗಿರುತ್ತದೆ. ಅದು ದಯೆ, ಪ್ರೀತಿ, ಒಲವು, ಸಹಾನುಭೂತಿ, ಅನುಕಂಪ, ಕರುಣೆ, ವಿನಯ, ಮೃದುತ್ವ, ಸೇವೆ, ಅರ್ಪಣೆ, ಆಚಾರ ವಿಚಾರ ಮೊದಲಾದ ಮೌಲ್ಯಗಳಿಂದ ಬದುಕನ್ನು ಅರ್ಥೈಸಿಕೊಳ್ಳುವ ಅತ್ಯುತ್ಕೃಷ್ಟ ಮಾರ್ಗವೇ ದೈವಸಾಕ್ಷಾತ್ಕಾರವಾಗಿದೆ.

ಭಗವಂತನ ಅಸ್ತಿತ್ವವನ್ನು ಅಂಗೀಕರಿಸಿರುವ ಶರಣಧರ್ಮವು ಭಗವಂತನನ್ನು ಸಾಕಾರವೂ ಅಲ್ಲದ ನಿರಾಕಾರವೂ ಅಲ್ಲದ ವಿಶಿಷ್ಟವಾದ ಲಿಂಗದ ಸ್ವರೂಪದಲ್ಲಿ ಕಾಣುತ್ತದೆ. ಭಗವಂತನ ಇರವನ್ನು ಮನುಷ್ಯನು ಮಾತ್ರಾ ಅರಿಯಬಲ್ಲವನಾಗಿದ್ದಾನೆ. ಶುದ್ಧಜ್ಞಾನಕ್ಕೆ ನಿರಾಕಾರವಾಗಿಯೂ, ಅರ್ಚನೆ ಉಪಾಸನೆ ಅನುಸಂಧಾನಗಳಿಗೆ ಸಾಕಾರನಾಗಿಯೂ ಭಗವಂತ ಗೋಚರಿಸುತ್ತಾನೆ. ಆತನು ಅಗಮ್ಯ, ಅಗೋಚರ, ಅಪ್ರತಿಮನಾಗಿಯೂ ಭಕ್ತನ ಭಕ್ತಿಯ ದೆಸೆಯಿಂದ ಪೂಜೆಗಾಗಿ ಆತನ ಕರಸ್ಥಲಕ್ಕೆ ಚುಳುಕಾಗಿ ಬಂದು ನೆಲೆಸಿರುತ್ತದೆ. ಇಂಥ ರೂಪು ತಳೆದಿರುವುದರಿಂದ ಅದನ್ನು ಕೇವಲ ನಿರಾಕಾರವೆನ್ನಲಾಗುವುದಿಲ್ಲ. ಇಷ್ಟಲಿಂಗವು ಕರಚರಣಾದಿಗಳಿಲ್ಲದ ಸಾಕಾರವಾಗಿದ್ದರೂ ನಿರಾಕಾರವಾದ ದಿವ್ಯಾನುಭವವನ್ನು ಉಂಟುಮಾಡುವುದರಿಂದ ಅದನ್ನು ಕೇವಲ ಸಾಕಾರವೆನ್ನಲಾಗುವುದಿಲ್ಲ.

ಶರಣಧರ್ಮದಲ್ಲಿ ನಿರಾಕಾರ ಸಾಕಾರಗಳು ಪ್ರತ್ಯೇಕಗಳಲ್ಲ. ಅವು ಸಾಧನೆಯ ಮಜಲುಗಳು. ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ಸಾಧಕನು ಸಾಕಾರದ ನಿಚ್ಚಣಿಗೆಯ ಮೂಲಕವೇ ನಿರಾಕಾರದ ಶಿಖರವನ್ನೇರಬೇಕು. ಭಕ್ತಿ ಜ್ಞಾನಗಳೆರಡೂ ಸಾಧನೆಯ ಅಂಗವಾಗಿರುವುದರಿಂದ ಕರಸ್ಥಲದ ಇಷ್ಟಲಿಂಗವನ್ನು ಸಕಲವೆಂದೂ, ಪ್ರಾಣ ಲಿಂಗವನ್ನು ಸಕಲ ನಿಷ್ಕಲವೆಂದೂ, ಭಾವಲಿಂಗವನ್ನು ನಿಷ್ಕಲವೆಂದೂ ಕರೆಯಲಾಗಿದೆ. ಸಾಧನೆಯ ದೃಷ್ಟಿಯಿಂದ ಪ್ರಾರಂಭದ ಹಂತದಲ್ಲಿ ಸಾಧಕನ ಮನಸ್ಸು ಇಷ್ಟಲಿಂಗದ ಆಚರಣೆಗಳ ಮೂಲಕ ಭಕ್ತಿಯಲ್ಲಿ ಊರ್ಧ್ವಗಾಮಿಯಾಗಿ, ಮುಂದೆ ಪ್ರಾಣಲಿಂಗ, ಭಾವಲಿಂಗಗಳ ಮೂಲಕ ಜ್ಞಾನಮಾರ್ಗಿಯಾಗಿ ಅಷ್ಟಾವರಣ, ಪಂಚಾಚಾರ, ಷಟ್ಸ್ಥಲಗಳ ಮೂಲಕ ಸಿದ್ಧಿಯನ್ನು ಪಡೆದು ಆತ್ಮಸಾಕ್ಷಾತ್ಕಾರ ಪಡೆಯಬೇಕಾಗುತ್ತದೆ. ಶ್ರೀ ಗುರುವಿನಿಂದ ಇಷ್ಟಲಿಂಗೋಪದೇಶ ಪಡೆದ ಸಾಧಕನು ತನ್ನ ಸ್ಥೂಲಶರೀರದಲ್ಲಿ ತನ್ನ ಸ್ವಸ್ವರೂಪದ ಪ್ರತಿಬಿಂಬವಾದ ಇಷ್ಟಲಿಂಗವನ್ನು, ಸೂಕ್ಷ್ಮಶರೀರದಲ್ಲಿ ಪ್ರಾಣಲಿಂಗವನ್ನು, ಕಾರಣಶರೀರದಲ್ಲಿ ಭಾವಲಿಂಗವನ್ನು ನಿರಂತರ ಸಾಧನೆಯಿಂದ ಪೂಜಿಸಿ ಮೋಕ್ಷ ಪಡೆಯುತ್ತಾನೆ. ಹೀಗೆ ಇಷ್ಟಲಿಂಗವೂ ಪೂಜಕವಾದ ಶರಣನಿಗೆ ದೇವಾಲಯ ಸಂಸ್ಕೃತಿಗಳು ನಿಷಿದ್ಧವಾಗಿವೆ.

**ಆಯ್ದ ವಚನಗಳು :**

- **ಉಳ್ಳವರು ಶಿವಾಲಯವ ಮಾಡುವರು**
  **ನಾನೇನ ಮಾಡಲಿ ಬಡವನಯ್ಯಾ**
  **ಎನ್ನ ಕಾಲೇ ಕಂಬ, ದೇಹವೇ ದೇಗುಲ**
  **ಶಿರವೇ ಹೊನ್ನ ಕಳಸವಯ್ಯಾ**
  **ಕೂಡಲಸಂಗಮದೇವಾ ಕೇಳಯ್ಯಾ**
  **ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲಾ** **(ಬಸವಣ್ಣ)**

- **ಉಂಬ ಬಟ್ಟಲು ಬೇರೆ ಕಂಚಲ್ಲ;**
  **ನೋಡುವ ದರ್ಪಣ ಬೇರೆ ಕಂಚಲ್ಲ;**
  **ಭಾಂಡ ಒಂದೆ, ಭಾಜನ ಒಂದೆ; ಬೆಳಗೆ ಕನ್ನಡಿಯೆನಿಸಿತ್ತಯ್ಯಾ !**
  **ಅರಿದರೆ ಶರಣ; ಮರೆದರೆ ಮಾನವ**
  **ಮರೆಯದೆ ಪೂಜಿಸು ಕೂಡಲಸಂಗಯ್ಯನ** **(ಬಸವಣ್ಣ)**

- **ಕಾಲೇ ಕಂಬಗಳಾದವೆನ್ನ,**
  **ದೇಹವೇ ದೇಗುಲವಾಯಿತ್ತಯ್ಯಾ !**
  **ಎನ್ನ ನಾಲಗೆಯೆ ಗಂಟೆ,**

ಶಿರ ಸುವರ್ಣದ ಕಳಸ ಇದೇನಯ್ಯಾ !
ಸರವೆ ಲಿಂಗಕ್ಕೆ
ಸಿಂಹಾಸನವಾಗಿದ್ದಿತ್ತಯ್ಯಾ
ಗುಹೇಶ್ವರಾ ನಿಮ್ಮ ಪ್ರಾಣಲಿಂಗ ಪ್ರತಿಷ್ಠೆ,
ಪಲ್ಲಟವಾಗದಂತಿದ್ದೆನಯ್ಯಾ (ಅಲ್ಲಮಪ್ರಭು)

- ದೇಹದೊಳಗೆ ದೇವಾಲಯವಿದ್ದು
ಮತ್ತೆ ಬೇರೆ ದೇಗುಲವೇಕಯ್ಯಾ ?
ಎರಡಕ್ಕೆ ಹೇಳಲಿಲ್ಲಯ್ಯಾ
ಗುಹೇಶ್ವರಾ ನೀನು ಕಲ್ಲಾದಡೆ ನಾನು ಏನಪ್ಪನು ? (ಅಲ್ಲಮಪ್ರಭು)

- ಕಾಯವೆ ದೇಗುಲವಾಗಿ
ಕುರುಹಿಟ್ಟು ಕೊಟ್ಟ ಕುರುಹೆ ದೇವರಾಗಿ
ನೋಡುವ ಕಣ್ಣೆ ಪೂಜಿಸುವ ಹೂವಾಗಿ,
ಆನಂದಾಶ್ರುಗಳೆ ಸಕಲಭೋಗ, ಅಷ್ಟವಿಧಾರ್ಚನೆ
ಷೋಡಶೋಪಚರಿಯವಾಗಿ,
ಅರತುದೆ ಅಡ್ಡವಣಿಗೆ ಪರಿಯಾಣವಾಗಿ,
ಪರಿಣಾಮವೆ ನೈವೇದ್ಯವಾಗಿ,
ಅಖಂಡಭಕ್ತಿರತಿಯೆ ತಾಂಬೂಲವಾಗಿ
ಪೂಜಿಸುತಿರ್ದೆನಯ್ಯಾ,
ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೇ
ಎನ್ನ ಪ್ರಾಣಪೂಜೆಯ ನಿಮಗೆ (ಶಿವಲೆಂಕ ಮಂಚಣ್ಣ)